# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 145 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 08.12.2024 • ಭಾನುವಾರ • ಪುಟ:04 • ಬೆಲೆ:2
Volume:02 • Issue: 145 • PRGI No:KARKAN/2023/88055 • VIJAYANAGARA • 08.12.2024 • Sunday • Page:04 • Rs:2

BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits

No.1 HAMPI TIMES LEADING VIJAYANAGARA District News Paper

ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com

ಮೈಕ್ರೋ ನ್ಯೂಸ್

## ಇಂದು ಸಂಡೂರಿಗೆ ಸಿಎಂ ಸಿದ್ಧರಾಮಯ್ಯ

ಹಂಪಿ ಟೈಮ್ಸ್ ಬಳ್ಳಾರಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.08 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಹೆ ಚ್ ಎ ಎ ಲ್ ನ ವಿಮಾನ ನಿಲ್ದಾಣ ದಿಂದ (ವಿಶೇಷ ವಿಮಾನದ ಮೂಲಕ) ನಿರ್ಗಮಿಸಿ ಬೆಳಿಗ್ಗೆ 10.50 ಕ್ಕೆ ತೋರಣ ಗಲ್‌ನ ಜಿಂದಾಲ್‌ನ ಏರ್‌ಸ್ಟ್ರಿಪ್ ಗೆ ಆಗಮಿಸುವರು.
11.15 ಗಂಟೆಗೆ ಸಂಡೂರು ಪಟ್ಟಣದಲ್ಲಿ ಪಕ್ಷದ ವತಿಯಿಂದ ಆಯೋಜಿಸಿರುವ ಸಂಡೂರು ವಿಧಾನಸಭಾ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಕೆ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 2.50 ಕ್ಕೆ ವಿಶೇಷ ವಿಮಾನದ ಮೂಲಕ ಹುಬ್ಬಳ್ಳಿಗೆ ತೆರಳುವರು ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಕೆ.ಚಿರಂಜೀವಿ ತಿಳಿಸಿದ್ದಾರೆ.

## 13 ನಾಮಪತ್ರ ಕ್ರಮಬದ್ಧ

ಹಂಪಿ ಟೈಮ್ಸ್ ಕಂಪ್ಲಿ



ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಗಳಿಗೆ ಸ್ಪರ್ಧಾಕಾಂಕ್ಷಿಗಳು ಸಲ್ಲಿಸಿದ ನಾಮಪತ್ರಗಳ ಪರಿಶೀಲನೆ ಶನಿವಾರ ನಡೆಯಿತು. 15 ಸ್ಥಾನಗಳಿಗೆ 13 ಜನ ನಾಮಪತ್ರ ಸಲ್ಲಿಸಿದ್ದು ನಾಮ ಪತ್ರಗಳು ಕ್ರಮ ಬದ್ಧವಾಗಿವೆ ಎಂದು ಚುನಾವಣಾಧಿಕಾರಿ ಡಾ.ಸಿ.ಆರ್.ಅಭಿಲಾಷ ತಿಳಿಸಿದರು.
ಎಮ್ಮಿಗನೂರಿನ ವಿ.ಮಲ್ಲಿಕಾರ್ಜುನ, ಬಿ. ಸದಾಶಿವಪ್ಪ, ನಂ.10 ಮುದ್ದಾಪುರದ ಜಿ. ಸೋಮಶೇಖರ, ಚೆನ್ನ ಬಸಪ್ಪ, ವಿಪ್ರದ ನಾರಾಯಣಪ್ಪ, ಕಣಿವೆ ತಿಮ್ಮಲಾಪುರದ ಜಿ.ಸಿದ್ದನಗೌಡ, ಬಿ.ನೀಲ ಕಂಠಪ್ಪ, ಜಿ.ತಿಮ್ಮನಗೌಡ, ಜಿ.ನಾರಾಯಣ, ನಂ.10 ಮುದ್ದಾಪುರದ ಯು.ದೊಡ್ಡಬಸಪ್ಪ, ಹರಿಜನ ಹುಲುಗಪ್ಪ, ನಾಗರಾಜ, ಪತ್ತಾರು ಅಯ್ಯಪ್ಪ ಅವರ ನಾಮಪತ್ರಗಳು ಕ್ರಮಬದ್ಧವಾಗಿವೆ. ಡಿ.15 ಚುನಾವಣೆ ನಡೆಯಲಿದೆ ಎಂದು ತಿಳಿಸಿದ್ದಾರೆ.

## ಸರ್ಕಾರ 2 ಲಕ್ಷ ರೂ ಘೋಷಣೆ, ಹೆಚ್ಚಿನ ಪರಿಹಾರಕ್ಕೆ ಸಿಎಂಗೆ ಒತ್ತಾಯ : ಶಾಸಕ ಡಾ.ಎನ್.ಟಿ.ಶ್ರೀನಿವಾಸ

ಹಂಪಿ ಟೈಮ್ಸ್ ಹೊಸಪೇಟೆ

ಬಾಣಂತಿಯರ ಸರಣಿ ಸಾವಿನ ಪ್ರಕರಣ ಹಿನ್ನೆಲೆಯಲ್ಲಿ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಮೃತ ಬಾಣಂತಿ ಸುಮಯಾ ಮನೆಗೆ ಶನಿವಾರ ಭೇಟಿ ನೀಡಿ ಕುಟುಂಬದವರಿಗೆ ಸಂತೈಸಿದರು.
ಪ್ರವಾಸಿ ಮಂದಿರದಲ್ಲಿ ಇನ್ನೋರ್ವ ಮೃತ ಬಾಣಂತಿ ಮಹಾಲಕ್ಷ್ಮಿ ಮಗುವಿನ ಆರೋಗ್ಯದ ಬಗ್ಗೆ ಮಾಹಿತಿ ಪಡೆದರು. ಇಬ್ಬರು ಮಕ್ಕಳ ಪಾಲನೆಗೆ ಕುಟುಂಬದವರಿಗೆ ನಿಗಾವಹಿಸಲು ಸೂಚಿಸಿದರು. ಈ ವೇಳೆ ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಇಬ್ಬರು ಬಾಣಂತಿಯರು ಮೃತಪಟ್ಟಿದ್ದಾರೆ. ಎರಡು ಕುಟುಂಬಕ್ಕೆ ತಲಾ ಐವತ್ತು ಸಾವಿರ ರೂಪಾಯಿ ಪರಿಹಾರವಾಗಿ ನೀಡುತ್ತೇನೆ. ಇಬ್ಬರು ಮಕ್ಕಳ ಹೆಸರಿನಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿ ಪಾವತಿಸುತ್ತೇನೆ. ಈಗಾಗಲೇ ಸರ್ಕಾರದಿಂದ 2 ಲಕ್ಷ ರೂ ಪರಿಹಾರ ಘೋಷಣೆ ಮಾಡಲಾಗಿದೆ. ಹೆಚ್ಚಿನ ಪರಿಹಾರಕ್ಕಾಗಿ ಸಿಎಂ ಅವರನ್ನು ಒತ್ತಾಯಿಸಲಾಗುವುದು. ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಹೆಚ್ಚಿನ ಪರಿಹಾರ ನೀಡೋ ವಿಶ್ವಾಸವಿದೆ. ಜಿಲ್ಲಾ ಉಸ್ತುವಾರಿ ಸಚಿವರು ಕೂಡಾ ವೈಯಕ್ತಿಕ ಪರಿಹಾರ ನೀಡೋದಾಗಿ ಹೇಳಿದ್ದಾರೆ ಎಂದರು. ಈ ವೇಳೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಡಿಹೆಚ್‌ಒ ಶಂಕರ ನಾಯ್ಕ, ಆರ್ ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ತಹಸೀಲ್ದಾರ ರೇಣುಕಮ್ಮ ಇತರರಿದ್ದರು.

### ಬಾಣಂತಿಯರ ಸರಣಿ ಸಾವಿಗೆ ತಲ್ಲಣಿಸಿದ ಜೀವಗಳು

# ಜಿಲ್ಲಾಸ್ಪತ್ರೆಯ ನಿರ್ಲಕ್ಷ್ಯಕ್ಕೆ ಸಾವು ಬಡವರ ಜೀವಕ್ಕೆ ಬೆಲೆ ಇಲ್ವಾ?

### ಸಚಿವರಿಗೆ ಪ್ರಶ್ನಿಸಿದ ಸಮುಯ್ಯಳ ಪತಿ ರೆಹಮಾನ್ | ಸಚಿವ ದಿನೇಶ್ ಗುಂಡೂರಾವ್ ಸಾಂತ್ವನ

■ ಹಂಪಿ ಟೈಮ್ಸ್ ಕೂಡ್ಲಿಗಿ



ಸಚಿವ ದಿನೇಶ್ ಗುಂಡೂರಾವ್ ಪಟ್ಟಣದ ಆಜಾದ್ ನಗರದ ಮೃತ ಸುಮಯ್ಯ ಮನೆಗೆ ಭೇಟಿನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಈ ಸಂಧರ್ಭದಲ್ಲಿ ಸಚಿವ ದಿನೇಶ್ ಗುಂಡೂರಾವ್ ಮೃತ ಸುಮಯ್ಯ ಪತಿ ರೆಹಮಾನ್ ಗೆ ಧೈರ್ಯತುಂಬಿ ಮಾತನಾಡಿ, ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ನಿಮಗೆ ಬೇಕಾದ ಸೂಕ್ತ ಎಲ್ಲಾ ಸಹಾಯ ಮಾಡುವುದಾಗಿ ತಿಳಿಸಿದರು. ಪರಿಹಾರದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಾತನಾಡಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು. ಮೃತ ಸುಮಯ್ಯಳ ಪತಿ ರೆಹಮಾನ್ ಮಾತನಾಡಿ ಜಿಲ್ಲಾಸ್ಪತ್ರೆಯ ನಿರ್ಲಕ್ಷ್ಯದಿಂದ ಈ ಸಾವು ಸಂಭವಿಸಿದ್ದು ನಮ್ಮಂತಹ ಬಡವರ ಸಾವಿಗೆ ಬೆಲೆ ಇಲ್ವಾ ಸಾರ್ ಎಂದು ಸಚಿವರಿಗೆ ಪ್ರಶ್ನಿಸಿದ ನಂತರ ನಮ್ಮ ಪರಿಸ್ಥಿತಿ ಯಾರಿಗೂ ಬಾರದಂತೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ಸಚಿವರಿಗೆ ಅಲವತ್ತುಕ್ಕೊಂಡು ಗೋಳಾಡಿದನು. ಇದಕ್ಕೆ ಸಮಾಧನಪಡಿಸಿ ಮಾತನಾಡಿದ ಸಚಿವರು ಈಗಾಗಲೇ ಸಾವಿಗೆ ತನಿಖಾ ತಂಡವನ್ನು ರಚಿಸಿದ್ದು ವರದಿ ಬಂದ ನಂತರ ಕ್ರಮಕ್ಕೆ ಮುಂದಾಗುವ ಭರವಸೆ ನೀಡಿದರು. ಇದೇ ಸಂಧರ್ಭದಲ್ಲಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ವೈಯುಕ್ತಿಕವಾಗಿ ಮಗುವಿನ ಹೆಸರಲ್ಲಿ ಭದ್ರತಾ ಠೇವಣಿ ಇಡಲು 50 ಸಾವಿರ ರೂಪಾಯಿಗಳ ಚೆಕ್ ನೀಡಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು,
ಇತ್ತೀಚೆಗೆ ಸುಮಯ್ಯ ತೀರಿಕೊಂಡಿದ್ದಾರೆ. ಚಿಕಿತ್ಸೆ ಪಡೆದು ಗುಣಮುಖವಾಗುತ್ತಿದ್ದರು ಆದರೆ ದುರ್ದೈವ ಮೃತಪಟ್ಟಿದ್ದಾರೆ. ಅವರ ಕುಟುಂಬಕ್ಕೆ ಧೈರ್ಯ ತುಂಬಲು ಬಂದಿದ್ದೇನೆ ಎಂದು ತಿಳಿಸಿದರು. ಮೃತರ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿವ ದಿನೇಶ್ ಗುಂಡೂರಾವ್, ಪರಿಹಾರ ನೀಡೋ ಬಗ್ಗೆ ಮುಖ್ಯಮಂತ್ರಿ ಜತೆ ಚರ್ಚೆ ಮಾಡಿ ಬೇರೆ ನಿರ್ಧಾರ ಕೈಗೊಳ್ಳುತ್ತೇವೆ ಎಂದು ತಿಳಿಸಿದರು. ಈ ವರೆಗೂ ಒಂದು ಜಿಲ್ಲಾ ಆಸ್ಪತ್ರೆಯಲ್ಲಿ ಒಂದು ಸಾವು ಆಗಿರಲಿಲ್ಲಾ ಇದೀಗ ಸಾವುಗಳಾಗಿವೆ, ಎಲ್ಲಿ ತಪ್ಪಾಗಿದೆ ಅದನ್ನು ಸರಿ ಮಾಡುವ ಕೆಲಸ ಮಾಡಬೇಕಿದೆ ಅದಕ್ಕಾಗಿ ತನಿಖಾ ತಂಡವನ್ನು ಕಳುಹಿಸಿದ್ದೆವೆ ಎಂದು ಸಮಜಾಯಿಷಿ ನೀಡಿದರು. ಈ ಪ್ರಕರಣದ ಬಗ್ಗೆ ಮಾಜಿ ಸಚಿವ ಶ್ರೀರಾಮುಲು ಪ್ರತಿಭಟನೆ ಮಾಡುತ್ತಿದ್ದಾರೆ ಈ ಬಗ್ಗೆ ಏನು ಹೇಳುವಿರಿ ಎನ್ನುವ ಪ್ರಶ್ನೆಗೆ ಸಚಿವರು ಉತ್ತರಿಸಿ, ವಿರೋಧ ಪಕ್ಷದವರು ಪ್ರತಿಭಟನೆ ಮಾಡೋದು ತಪ್ಪಲ್ಲಾ, ಮಾಡಲಿ ವಿಷಯ ಗೊತ್ತಾದ ತಕ್ಷಣವೇ ತನಿಖಾ ತಂಡವನ್ನು ಕಳುಹಿಸಿದ್ದೇವೆ ವರದಿ ನಂತರ ಎಲ್ಲಾ ರೀತಿಯ ಕ್ರಮ ಕೈಗೊಳ್ಳುತ್ತೇವೆ ಎಂದ ಅವರು, ಈ ಪ್ರಕರಣದ ಹೊಣೆಗಾರಿಕೆ ನಮ್ಮದಿದೆ ಅದನ್ನು ನಿಭಾಯಿಸುತ್ತೇವೆ, ಕೇವಲ ಪ್ರಚಾರಕ್ಕೆ ವಿರೋಧ ಪಕ್ಷದವರಂತೆ ಪ್ರತಿಭಟನೆ ನಾಟಕ ಮಾಡೋದಲ್ಲ ಎಂದು ಟಾಂಗ್ ನೀಡಿದರು. ನಾವು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ತಗೆದುಕೊಂಡಿದ್ದೇವೆ ಪ್ರಚಾರಕ್ಕೆ ಯಾವುದನ್ನು ಮಾಡಬಾರದು
ನಮ್ಮ ಕರ್ತವ್ಯವನ್ನು ನಾವು ಮಾಡುತ್ತೇವೆ ಎಂದು ತಿಳಿಸಿದರು. ಕೇವಲ ಬಳ್ಳಾರಿ ಘಟನೆ ಮಾತ್ರವಲ್ಲ ರಾಜ್ಯದಲ್ಲಿ ಇಲ್ಲಿವರೆಗೂ ಈ ವರ್ಷ 327 ಬಾಣಂತಿಯರು ಮೃತಪಟ್ಟಿದ್ದಾರೆ. ಅವರ ಸಾವಿಗೆ ಕೂಡಾ ಕಾರಣದ ತನಿಖೆ ಮಾಡುವಂತೆ ಹೇಳಿದ್ದೇನೆ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ಡಿಸಿ ಎಂ.ಎಸ್. ದಿವಾಕರ್, ಡಿಎಚ್‌ಒ ಶಂಕರ್ ನಾಯ್ಕ್, ತಹಸೀಲ್ದಾರ್ ಎಂ ರೇಣುಕಾ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸ್ಥಾಯಿ ಸಮಿತಿ ಅಧ್ಯಕ್ಷ ಸಯ್ಯದ್ ಶುಕೂರ್, ಎನ್.ಟಿ.ತಮ್ಮಣ್ಣ ಇದ್ದರು.

## ಬಾಣಂತಿ ಸಾವು : ನಿರ್ಲಕ್ಷ್ಯ ವೈದ್ಯರ ವಿರುದ್ಧ ಕ್ರಮಕ್ಕೆ ಆಗ್ರಹ



■ ಹಂಪಿ ಟೈಮ್ಸ್ ಕಂಪ್ಲಿ

ಇತ್ತೀಚೆಗೆ ಬೀಮ್ಸ್‌ನಲ್ಲಿ ಮೃತಪಟ್ಟಿದ್ದ ಬಾಣಂತಿ ರೋಜಾ ಮನೆಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕುರುಗೋಡು ತಾಲೂಕು ಸಮಿತಿ ಪದಾಧಿಕಾರಿಗಳು ಶನಿವಾರ ಭೇಟಿ ನೀಡಿ ಸಾಂತ್ವನ ಹೇಳಿದರು.
ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ವಿ.ಎಸ್. ಶಿವಶಂಕರ್ ಮಾತನಾಡಿ, ಬಾಣಂತಿ ಸಾವಿಗೆ ಕಾರಣನಾದ ಬೀಮ್ಸ್ ನಿರ್ದೇಶಕ ಗಂಗಾಧರಗೌಡ, ಜಿಲ್ಲಾ ಶಸ್ತ್ರ ಚಿಕಿತ್ಸಕ ಬಸವರೆಡ್ಡಿ ಇವರ ನಿರ್ಲಕ್ಷ್ಯ ಕಾರಣವಾಗಿದ್ದು, ಇವರ ವಿರುದ್ಧ 304ಎ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಿ, ಸಮಗ್ರ ತನಿಖೆಗೊಳಪಡಿಸಬೇಕು. ರೋಜಾ ಕುಟುಂಬ ಭೂರಹಿತ, ಕಡುಬಡ ಕುಟುಂಬವಾಗಿದ್ದು ಸಮಾಜ ಕಲ್ಯಾಣ ಇಲಾಖೆ ಅಕ್ಕಿ, ಬೇಳೆ, ಎಣ್ಣೆ ಆಹಾರ ಪದಾರ್ಥಗಳನ್ನು ಒದಗಿಸಬೇಕು, ಮನೆ ನಿರ್ಮಿಸಿ ಕೊಡಬೇಕು, ರೋಜಾಳ ಪತಿಗೆ ಸರ್ಕಾರಿ ಉದ್ಯೋಗ ನೀಡಬೇಕು. ಮಗುವಿನ ಶಿಕ್ಷಣ ವೆಚ್ಚವನ್ನು ಸರ್ಕಾರ ಭರಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾಡಳಿತ, ಶಾಸಕ, ಸಂಸದ, ಆರೋಗ್ಯ ಸಚಿವರು ರೋಜಾ ಕುಟುಂಬವನ್ನು ಸಂತೈಸಲು ಬಾರದೆ ದಲಿತ ವಿರೋಧಿ ನೀತಿ ಅನುಸರಿಸಿದೆ ಎಂದು ಆಪಾದಿಸಿದರು. ಸಿಪಿಐಎಂ ಜಿಲ್ಲಾ ಸಮಿತಿ ಸದಸ್ಯ ಗಾಳಿ ಬಸವರಾಜ, ಪದಾಧಿಕಾರಿಗಳಾದ ಎನ್. ಸೋಮಪ್ಪ, ಟಿ.ಅಮೀನ್‌ಸಾಬ್, ಎ.ಮಂಜುನಾಥ, ಕೆ.ಜಯರಾಮ್, ಎಚ್. ವೀರೇಶ, ದೊಡ್ಡಬಸಮ್ಮ, ಜಡೆಮ್ಮ ಇದ್ದರು.

## ತಿಮ್ಮಲಾಪುರ ಐತಿಹಾಸಿಕ ಶ್ರೀ ವೇಣುಗೋಪಾಲಸ್ವಾಮಿ ತ್ರಿಕೂಟೇಶ್ವರ ದೇವಸ್ಥಾನಗಳಿಗೆ ಡಿಸಿ ಭೇಟಿ ಪರಿಶೀಲನೆ

■ ಹಂಪಿ ಟೈಮ್ಸ್ ಹೊಸಪೇಟೆ



ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ವ್ಯಾಪ್ತಿಯ ತಿಮ್ಮಲಾಪುರ ಗ್ರಾಮದಲ್ಲಿನ ಶ್ರೀ ವೇಣುಗೋಪಾಲ ಸ್ವಾಮಿ ಹಾಗೂ ತ್ರಿಕೂಟೇಶ್ವರ ದೇವಸ್ಥಾನಗಳಿಗೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಭೇಟಿ ನೀಡಿ ಪರಿಶೀಲಿಸಿದರು.
ಐತಿಹಾಸಿಕ ಹಿನ್ನೆಲೆಯುಳ್ಳ ದೇವಾಲಯಗಳನ್ನು ಸಂರಕ್ಷಿಸಿ ಭಕ್ತರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು. ಈ ಹಿಂದಿನಿಂದಲೂ ಈ ದೇವಸ್ಥಾನದ ಪ್ರದೇಶದಲ್ಲಿ ಮದುವೆ ಸಮಾರಂಭಗಳನ್ನು ನಡೆಸುತ್ತಾ ಬಂದಿದ್ದು ಹಾಲೀ ಪುರಾತತ್ವ ಇಲಾಖೆ ಅಧಿಕಾರಿಗಳು ಇದಕ್ಕೆ ಅನುಮತಿ ನೀಡುತ್ತಿಲ್ಲವೆಂದು ಗ್ರಾಮಸ್ಥರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.
ಭಕ್ತರ ಹಾಗೂ ಗ್ರಾಮಸ್ಥರ ಬೇಡಿಕೆ ಆಲಿಸಿದ ಜಿಲ್ಲಾಧಿಕಾರಿಗಳು ದೇವಸ್ಥಾನಗಳು ಭಾರತೀಯ ಪುರಾತತ್ವ ಇಲಾಖೆ ವ್ಯಾಪ್ತಿಗೊಳಪಡುತ್ತಿದ್ದು ಪುರಾತತ್ವ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ ಶಿಥಿಲಾವಸ್ಥೆಗೆ ತಲುಪುತ್ತಿರುವ ಸದರಿ ದೇವಸ್ಥಾನಗಳನ್ನು ಸಂರಕ್ಷಿಸಲು ತಕ್ಷಣವೇ ಕ್ರಮ ಕೈಗೊಳ್ಳಾಗುವುದು ಎಂದು ತಿಳಿಸಿದರು. ಸಾರ್ವಜನಿಕರಿಗೆ ಸದರಿ ಪುರಾತನ ಸ್ಮಾರಕಗಳ ವೀಕ್ಷಣೆಗೆ ಹಾಗೂ ದೇವಸ್ಥಾನಕ್ಕೆ ಬರುವಂತಹ ಭಕ್ತಾದಿಗಳಿಗೆ ಅವಶ್ಯವಿರುವ ರಸ್ತೆ ಸಂಪರ್ಕ & ಸ್ಮಾರಕಗಳ ವಿವರಣೆಯುಳ್ಳ ನಾಮಫಲಕಗಳನ್ನು ಹಾಕುವಂತೆ ಹಾಜರಿದ್ದ ಪುರಾತತ್ವ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ಮಾಡಿದರು. ಜಿಲ್ಲಾಧಿಕಾರಿಗಳ ಸ್ಪಂದನೆಗೆ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.
ತಿಮಲಾಪುರ ಗ್ರಾಮದ ಸರ್ಕಾರಿ ಅಂಗನವಾಡಿ ಶಾಲೆಗೆ ಅನಿರೀಕ್ಷಿತ ಭೇಟಿ ನೀಡಿದರು ಹಾಗೂ ಅಂಗನವಾಡಿ ಕೇಂದ್ರಕ್ಕೆ ಪೂರೈಕೆಯಾಗುತ್ತಿರುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸಿ, ಮಕ್ಕಳಿಗೆ ಸಿದ್ದಪಡಿಸಿದ್ದ ಸಿಹಿಯೂಟ ರುಚಿ ನೋಡಿ, ಸಿಹಿ ಕಡಿಮೆಯಾಗಿದೆ, ಮಕ್ಕಳಿಗೆ ರುಚಿಗೆ ತಕ್ಕಷ್ಟು ಸಿಹಿ ಇರಲಿ ಎಂದು ಅವರು, ಮಕ್ಕಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಮತ್ತು ಮಳೆಗೆ ನೀರು ಸೋರದಂತೆ ಶೀಟ್ ಅಳವಡಿಸಲಾಗುವುದು ಎಂದರು.

### ಆನಂದ ಬಾಣ




## ವಿವಿದೆಡೆ ಪುತ್ಥಳಿ ಸ್ಥಾಪನೆ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

■ ಹಂಪಿ ಟೈಮ್ಸ್ ಕಂಪ್ಲಿ

ಕಂಪ್ಲಿ ಪಟ್ಟಣದಲ್ಲಿ ವಿವಿಧೆಡೆ ವೃತ್ತ ಹಾಗೂ ಮಹನೀಯರ ಪುತ್ಥಳಿಗಳನ್ನು ಸ್ಥಾಪಿಸಿ ಅನಾವರಣಗೊಳಿಸಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರು ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ತಿಳಿಸಿದ್ದಾರೆ.
ಕಂಪ್ಲಿ ಪಟ್ಟಣದ ವಿವಿಧ ಪ್ರದೇಶಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತ, ಮಹರ್ಷಿ ವಾಲ್ಮೀಕಿ ವೃತ್ತ, ಕನಕದಾಸರ ವೃತ್ತ, ಬಸವೇಶ್ವರ ವೃತ್ತ ಮತ್ತು ಮೌಲಾನಾ ಅಬುಲ್ ಕಲಾಂ ಆಜಾದ್ ವೃತ್ತಗಳನ್ನು ನಿರ್ಮಿಸಿ, ಅವರ ಪುತ್ಥಳಿಯನ್ನು ಅನಾವರಣ ಮಾಡುವ ಕುರಿತು ಕಂಪ್ಲಿ ಶಾಸಕರು ಕೋರಿರುತ್ತಾರೆ. ಕಂಪ್ಲಿ ಪಟ್ಟಣದ ವಿವಿಧ ಪ್ರದೇಶಗಳಲ್ಲಿ ವೃತ್ತಗಳನ್ನು ನಿರ್ಮಿಸಿ, ಮಹನೀಯರ ಪುತ್ಥಳಿಯನ್ನು ಅನಾವರಣ ಮಾಡುವ ಬಗ್ಗೆ ಯಾರಿಗಾದರೂ ಆಕ್ಷೇಪಣೆಗಳಿದ್ದಲ್ಲಿ ಲಿಖಿತ ಮತ್ತು ಪೂರಕ ದಾಖಲೆಗಳೊಂದಿಗೆ ಪ್ರಕಟಣೆಗೊಂಡ 30 ದಿನದೊಳಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಲ್ಲಿಸಬಹುದಾಗಿದೆ. ಅವಧಿ ಮೀರಿ ಬಂದ ಮನವಿ ಹಾಗೂ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE READERS

Classified Advertisements
Examples: Job postings, Real estate listings, Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com

# ಸ್ಟುಡೆಂಟ್ ಕಾಲಂ

## ಹೊರಟಿದ್ದು ಇಬ್ಬರು ಮರಳಿದ್ದು ಮೂವರು



ಬಸರಕೋಡು ಎಂಬ ಊರಿನಲ್ಲಿ ಸಚಿನ್ ಮತ್ತು ಶರಣ್ ಇಬ್ಬರು ಗೆಳೆಯರಿದ್ದರು. ಅವರಿಬ್ಬರೂ 9ನೇ ತರಗತಿ ಓದುತ್ತಿದ್ದರು. ಯಾವುದೇ ಸಂದರ್ಭ ಬಂದರು ಒಬ್ಬರನ್ನೊಬ್ಬರು ಬಿಟ್ಟು ಅಗಲುತ್ತಿರಲಿಲ್ಲ. ಅವರಿಬ್ಬರೂ ಒಗ್ಗಟ್ಟಾಗಿ ಇರುತ್ತಿದ್ದರು. ಯಾವುದೇ ಹೋಂವರ್ಕ್‌ನ್ನೂ ಕೂಡಾ ಇಬ್ಬರು ಜೊತೆಯಾಗಿ ಕುಳಿತುಕೊಂಡು ಮಾಡುತ್ತಿದ್ದರು. ಎಲ್ಲಾ ಚಟುವಟಿಕೆಗಳಲ್ಲೂ ಇಬ್ಬರೂ ಮುಂದೆ ಇರುತ್ತಿದ್ದರು.

ಶರಣ್ ಮಾಡಿದ ಹೋಂವರ್ಕ್ ಅನ್ನು ಸಚಿನ್‌ನಿಗೆ ಹೇಳುತ್ತಿದ್ದನು. ಸಚಿನ್ ಮಾಡಿದ ಹೋಂವರ್ಕ್ ಅನ್ನು ಶರಣನಿಗೆ ಹೇಳುತ್ತಿದ್ದನು. ಬಹಳ ದಿನಗಳಿಂದ ಇಬ್ಬರ ಸ್ನೇಹ ಹೀಗೆ ಇತ್ತು. ಅವರಿಬ್ಬರೂ ಕೂಡಿ ಒಂದು ದಿನ ಹೊರಸಂಚಾರಕ್ಕೆ ಹೋಗಬೇಕೆಂದು ಮಾತನಾಡಿಕೊಂಡರು. ಇಬ್ಬರ ಬಳಿ ಸೈಕಲ್ ಇತ್ತು. ಅವರಿಬ್ಬರೂ ಸೈಕಲ್‌ನಲ್ಲಿ ಪಕ್ಕದ ಕಾಡಿಗೆ ಹೊರ ಸಂಚಾರ ಹೊರಟರು. ಕಾಡಿನ ಒಳಗೆ ಹೋದಾಗ ದಾರಿಯಲ್ಲಿ ಒಂದು ಮರ ಬಿದ್ದಿತ್ತು. ಅವರಿಬ್ಬರು ಸೈಕಲ್‌ನಿಂದ ಕೆಳಗೆ ಇಳಿದು ಆ ಮರವನ್ನು ರಸ್ತೆಯ ಪಕ್ಕದಲ್ಲಿ ಹಾಕಿದ್ದರು. ಮತ್ತೆ ಅವರಿಬ್ಬರು ಮುಂದಕ್ಕೆ ಸಾಗುತ್ತಿದ್ದರು.



ಕಾಡಿನ ವಾತಾವರಣವನ್ನು ನೋಡಿ ಇಬ್ಬರಿಗೂ ಖುಷಿಯಾಯಿತು. ಅಲ್ಲಿಯೇ ಇದ್ದ ನದಿಯಲ್ಲಿ ನೀರು ಹರಿಯುತ್ತಿತ್ತು. ನದಿಯಲ್ಲಿ ಸ್ನಾನ ಮಾಡುವ ಮನಸ್ಸಾಯಿತು. ಆದರೆ ಚಳಿಗಾಲ ಇದ್ದುದರಿಂದ ನದಿಯಲ್ಲಿ ಸ್ನಾನ ಮಾಡಲು ಆಗಲಿಲ್ಲ. ಅವರು ಮುಂದೆ ಹೋದರು. ಹೋಗುವ ದಾರಿಯಲ್ಲಿ ಒಂದು ಜಿಂಕೆಯು ಆಹಾರ ಇಲ್ಲದೇ ಸಾಯುವಂತಾಗಿತ್ತು. ಇಬ್ಬರೂ ತಾವು ತಂದಿದ್ದ ಆಹಾರವನ್ನು ಆ ಜಿಂಕೆಗೆ ತಿನ್ನಿಸಿದರು. ಆಹಾರ ತಿಂದ ನಂತರ ಜಿಂಕೆಯು ಚೇತರಿಸಿಕೊಂಡಿತು. ಇಬ್ಬರನ್ನು ಹಿಂಬಾಲಿಸಿತು. ಸಂಜೆಯವರೆಗೂ ಕಾಡಿನಲಿ ಸುತ್ತಾಡಿ ಮನೆಗೆ ಹೊರಟರು. ಜಿಂಕೆಯು ಅವರನ್ನೂ ಹಿಂಬಾಲಿಸಿತ್ತು. ಅದನ್ನು ಕಾಡಿನಲ್ಲಿ ಬಿಟ್ಟು ಮನೆಗೆ ಹೋಗಲು ಇಬ್ಬರಿಗೂ ಮನಸ್ಸಾಗಲಿಲ್ಲ. ಅದನ್ನು ತಮ್ಮ ಜೊತೆಯಲ್ಲಿ ಊರಿಗೆ ಕರೆದುಕೊಂಡು ಹೋದರು. ಹೊರಸಂಚಾರಕ್ಕೆ ಹೊರಡುವಾಗ ಇಬ್ಬರಿದ್ದರು, ಮರಳಿ ಬರುವಾಗ ಮೂವರಾಗಿದ್ದರು. ಅವರಿಬ್ಬರ ಜೊತೆ ಇನ್ನೊಬ್ಬ ಸ್ನೇಹಿತ ಜೊತೆಯಾಗಿದ್ದ.

– ಜೀವನ ಕುಮಾರ. ಕೆ. 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ, ಬಸರಕೋಡು. ಹ.ಬೊ.ಹಳ್ಳಿ(ತಾ)

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಚೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

**ಇಲ್ಲಿಯವರೆಗೆ .(ಶ್ರದ್ಧೆ ಭಕ್ತಿಗಳಿಲ್ಲದ, ಪ್ರೀತಿ ಪ್ರೇಮಗಳಿಲ್ಲದೆ ಆಲಯವನ್ನು ಕಟ್ಟಲು ಸಾಧ್ಯವೆ? ಇದು ಹಮ್ಮು ಬಿಮ್ಮಿಗೆ, ಮನುಷ್ಯನ ಅಹಂಗೆ ಅವನ ಅಹಂಕಾರಕ್ಕೆ ಕಟ್ಟ ಹೊರಟ ಅರಮನೆ, ಇದು ಪ್ರೀತಿ ಪ್ರೇಮಗಳ ಅಡಿಪಾಯಕ್ಕೆ ಉಳಿಯನ್ನಿಟ್ಟು ಮನುಶ್ಯತ್ವಕ್ಕೆ ಬೆಂಕಿ ಇಟ್ಟ ಅರಗಿನ ಮನೆ..! ಹಾಗೆ ನಂದಿದ್ವಜದ ಕಲ್ಲಿನ ಕಂಬಕ್ಕೆ ಒರಗಿ ಕುಳಿತ ವೀರಚಾರ್ಯರರು ನೋವಿನಿಂದ ಕಣ್ಣುಗಳನ್ನು ಮುಚ್ಚುತ್ತಾರೆ, ಕಣ್ಣಂಚಿನಿಂದ ನೀರು ದಾರೆಯಾಗುತ್ತದೆ. ) ಮುಂದುವರಿದ ಭಾಗ-2**

# ಗರ್ಭಗುಡಿ



ಶ್ರೀನಿವಾಸನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡ ವೀರಾಚಾರ್ಯರು ಮತ್ತೊಮ್ಮೆ ಗದ್ಗತಿತರಾದರು, ನಡುಗುತ್ತಿದ್ದಅವರ ಧ್ವನಿ..... ನಾವಿನ್ನೂ ಆಗ ಹುಡುಗರು ಹತ್ತನ್ನರೆಡು ವರುಷಗಳಾಗಿರ ಬಹುದು, ಅಂದು ಊರ, ತುಂಬೆಲ್ಲ ಒಂದು ರೀತಿಯ ಉತ್ಸಾಹದ ವಾತಾವರಣ, ಅದೊಂದು ಜಾತ್ರೆ, ಜಾತ್ರೆ ಅಂದರೆ ಊರ ಜಾತ್ರೆ ಅದು. ಅಂದು "ರಾಜವಾಳದ" ತುಂಬೆಲ್ಲಾ ಸಡಗರದ ವಾತಾವರಣ ತುಂಬಿ ತುಳುಕುತಿತ್ತು, ಊರ ಜನರೆಲ್ಲರೂ ಸಂಭ್ರಮದಿಂದ ಊರ ಆಚೆಗಿನ ಹೊಳೆಯ ದಿಬ್ಬದಲ್ಲಿ ತಂಡೋಪ ತಂಡವಾಗಿ ಬಂದು ಸೇರಿದ್ದರು, ಎಲ್ಲರ ಬಾಯಿಯಲ್ಲಿ ಒಂದೇ ಮಾತು" ಇನ್ನು ನಮ್ಮ ಊರಿನ ಎಲ್ಲ ಸಂಕಷ್ಟಗಳು ಪರಿಹಾರವಾದಂತೆಯೆ" ಸ್ವತಃ ಮಹಾರಾಜರೇ ಇಂದು ಅವರ ಪರಿವಾರ ಸಹಿತರಾಗಿ ನಮ್ಮೂರಿಗೆ ಬರುತ್ತಿದ್ದಾರೆ, ಅವರ ಅಮೃತ ಹಸ್ತದಿಂದಲೇ ಮಹಾಶಿವನ ದೇವಾಲಯಕ್ಕೆ ಅಡಿಗಲ್ಲು ಹಾಕುವ ಸುದಿನ ಎಂದೆಲ್ಲ ಅಲ್ಲಲ್ಲೇ ಬಲ್ಲವರು ಮಾತನಾಡಿಕೊಳ್ಳುತ್ತಿದ್ದರು. ಮಹಾರಾಜರು ಬರುವ ದಾರಿಯುದ್ದಕ್ಕೂ ಸ್ವಚ್ಚಗೊಳಿಸಿ, ತಳಿರು ತೋರಣಗಳಿಂದ ಸಿಂಗರಿಸಿ, ಫಲ ಪುಶ್ಪಗಳನ್ನು ಅಲ್ಲಲ್ಲೆ ಅಚ್ಚುಕಟ್ಟಾಗಿ ಅಲಂಕರಿಸಿದ್ದರು. ಸಮಾಳ, ನಂದಿಕೋಲು, ಹುವ್ವಿನ ಪಲ್ಲಕ್ಕಿ, ಚತ್ರ ಚಾಮರಗಳು ಮಹಾರಾಜರಿಗಾಗಿ ಕಾದಿದ್ದವು. ಪಂಡಿತ ಪಾಮರರು, ಆಚಾರ್ಯರು, ವೇದಮೂರ್ತಿಗಳು ಮಂತ್ರ ಪಠಿಸುತ್ತಾ ವೇದಘೋಷಗಳನ್ನು ಮಾಡುತ್ತಿದ್ದರು.

ಮಾಘ ಮಾಸದ ಚಳಿಯನ್ನು ಬಡಿದೋಡಿಸುತ್ತ ನೇಸರ ನೆತ್ತಿಯ ಮೇಲೇರುತಿತ್ತು. ಅಶ್ವ ದಳದ ಸೈನಿಕರು, ಕಾಲ್ದಳದವರ ಸಮೇತರಾಗಿ, ಸಾರೋಟದ ಮೇಲೆ ಸಹ ಪರಿವಾರಿದ ಜೊತೆಯಲ್ಲಿ ಮಂತ್ರಿ, ರಾಜ ಗುರುಗಳು ಮತ್ತು ಅಂಗಸೇವಕರೊಂದಿಗೆ ರಾಜ ಪರಿವಾರ ಪುರ ಪ್ರೇವೆಶವನ್ನು ಮಾಡಿದ ಸುದ್ದಿ ತಿಳಿಯುತ್ತಿದ್ದಂತೆ ರಾಜವಾಳದ ಪುರ ಜನರ ಜಯಕಾರ ಮುಗಿಲು ಮುಟ್ಟುವಂತಿತ್ತು, ವೇದಮೂರ್ತಿಗಳು ಮಂತ್ರ ಪಠಿಸುತ್ತಾ ವೇದಘೋಷಗಳನ್ನು ಮಾಡುತ್ತಿದ್ದರು. ಪುಷ್ಪಮಳೆ ಗರೆಯುತ್ತ ರಾಜ ಪರಿವಾರವನ್ನು ಬರಮಾಡಿಕೊಂಡ ಜನರು, ಎತ್ತರದ ದಿಬ್ಬದ ಮೇಲೆ ಸಮತಟ್ಟಾಗಿ ಮಾಡಿದ ಆಸನದ ಮೇಲೆ ರಾಜಪರಿವಾರವನ್ನು ವಿರಮಿಸುವಂತೆ ವ್ಯವಸ್ಥೆ ಮಾಡಿತ್ತು. ಸ್ವಾಗತ, ವೇದಘೋಷ, ವೇದ ಪಠಣದ ನಂತರ ಮಹಾರಾಜರ ಅಮೃತ ಹಸ್ತದಿಂದ ದೇವಾಸ್ಥಾನದ ಶಂಕುಸ್ಥಾಪನೆ ಮಾಡಿ, ದೇವಾಸ್ಥಾನದ ಒಟ್ಟೂ ಖರ್ಚುವೆಚ್ಚವನ್ನು ರಾಜ್ಯದ ಬಕ್ಕಸದಿಂದಲೇ ಭರಿಸಲಾಗುವುದು ಎನ್ನುತ್ತಲೆ ನೆರದ ಜನಸಮುದಾಯ ಮಹರಾಜರಿಗೆ ಜಯಘೋಷಗಳನ್ನು ಮಾಡಿದರು. ಅಂದು ಊರ ಜನರೆಲ್ಲರೂ ಸಿಹಿಯನ್ನು ಉಂಡು ಸಂತೋಷದಿಂದ ಮನೆಗೆ ತೆರಳಿದರು.

ಕಾರ್ಯಕ್ರಮಗಳೆಲ್ಲ ಮುಗಿಯುವ ಹೊತ್ತಿಗೆ ಸೂರ್ಯ ತಂಪಾಗಿದ್ದ, ಗೋದೂಳಿಯ ಸಮಯ, ಸಕಲ ರಾಜಪರಿವಾರದೊಂದಿಗೆ ರಾಜ್ಯದಾನಿಗೆ ಹಿಂದಿರುಗುತ್ತಿದ್ದಾಗ, ಇದೇ ಸಮಯಕ್ಕೆ ಹೊಂಚು ಹಾಕಿ ಕಾಯಿತ್ತಿದ್ದ ಪಕ್ಕದ ರಾಜ್ಯದ ವೈರಿಪಡೆ ತಡ ರಾತ್ರಿಯ ಸಮಯವನ್ನೇ ಸದುಪಯೋಗ ಪಡಿಸಿಕೊಂಡು, ರಾಜಪರಿವಾರದ ಮೇಲೆ ಆಕ್ರಮಣವನ್ನು ಮಾಡಿ ರಾಜನೂ ಸೇರಿದಂತೆ ಅವನ ಎಲ್ಲಾ ಪರಿವಾರದವರನ್ನು ಹತ್ಯಗೈದರು..! ನಿರಾಯುದರಾದ ರಾಜ ಪರಿವಾರ ಕ್ಷಣಮಾತ್ರದಲ್ಲಿ ರಕ್ತದ ಮಡುವಿನಲ್ಲಿ ಮಣ್ಣಾಗಿ ಹೋದರು. ಈ ಸುದ್ದಿ ಬೆಳಗಾಗುವುದರಲ್ಲಿ ಈಡೀ ರಾಜ್ಯದಲ್ಲಿ ಭರಸಿಡಿಲು ಬಡಿದಂತೆ ಹಬ್ಬಿತು..! ಇದ್ದಕ್ಕಿದ್ದಂತೆ ರಾಜ ಹತನಾದ..! ಅದು ಸಹಪರಿವಾರದೊಂದಿಗ..! ರಾಜ್ಯದಲ್ಲಿ ಪ್ರಕ್ಷುಬ್ದ ವಾತಾವರಣ ಸೃಷ್ಟಿಯಾಯಿತು. ರಾಜವಾಳದ ಜನರಿಗಂತೂ ಏನೂ ತಿಳಿಯದಂತಾಗಿ ಒಟ್ಟೊಟ್ಟಿಗೆ ಒಂದು ರೀತಿಯ ಅನಾಥಪ್ರಜ್ಞೆ, ಪಾಪಪ್ರಜ್ಞೆ, ಅಪರಾದಿ ಬಾವ ಉಂಟಾಯಿತು. ನಮ್ಮ ಊರಿಗೆ ರಾಜ ಬಂದಿದ್ದರಿಂದಲೇ ಈ ಘೋರ ಅನ್ಯಾಯವಾಯಿತು, ರಾಜ್ಯಕ್ಕೆ ನಷ್ಟವಾಯಿತು ಎನ್ನುವ ಕೀಳರಿಮೆ ಊರತುಂಬೆಲ್ಲಾ ಮನೆ ಮಾಡಿತು. ನಿನ್ನೆ ರಾತ್ರಿ ಊಟ ಮಾಡಿ ಮಲಗಿ ಬೆಳಗಾಗು ವುದರಲ್ಲೆ ಎಲ್ಲ ನೆಡೆದು ಹೋಗಿತ್ತು ದುಸ್ವಪ್ನ ದಂತೆ..!



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ನಿಟ್ಟುಸುರು ಬಿಟ್ಟ ವೀರಾಚಾರ್ಯರು ಸುಧಾರಿಸಿಕೊಳ್ಳುತ್ತ ಮುಂದುವರಿಸಿದರು..... . ಊರ ತುಂಬೆಲ್ಲಾ ಸ್ಮಶಾನ ಮೌನ, ಮುಂದೇನು..? ಎನ್ನುವ ಪ್ರಶ್ನೆ ಎಲ್ಲರಲ್ಲೂ ಮನೆಮಾಡಿತ್ತು. ಸೂರ್ಯ ನೆತ್ತಿಗೇರುವ ಮಟ ಮಟ ಮದ್ಯಾಹ್ನದ ಸಮಯ ಜೋರಾಗಿ ಹಲಗಿ ಬಡಿಯುತ್ತಾ ಬಂದ ಸಾರುವವನು, "ಈ ದಿವಸ ಊರಿನ ಎಲ್ಲಾ ಜನರು ಊರ ಮುಂದಿನ ನ್ಯಾಯ ಕಟ್ಟೆಯ ಹತ್ತಿರ ಈಗಿಂದೀಗಲೇ ಬಂದು ಸೇರವುದು ಎಂದು ಗೌಡರ ಅಪ್ಪಣೆಯಾಗಿದೆ, ಕೇಳರಪ್ಪೂ ಕೇಳಿ.... ಕೇಳರಪ್ಪೂ ಕೇಳಿ.... ಎನ್ನುತ್ತ ಊರಾ ತುಂಬೆಲ್ಲ ಸಾರುತ್ತಿದ್ದನ್ನು ಕೇಳಿದ ಜನರೆಲ್ಲರೂ ತಂಡೋಪ ತಂಡವಾಗಿ ಊರ ಆಚಗಿನ ನ್ಯಾಯ ಕಟ್ಟೆಯ ಕಡೆಗೆ ಹೊರಟು ನಿಂತರು. ಏನು ನೆಡೆಯುತ್ತಿದೆ ಎನ್ನುವುದು ಅರಿಯದ ನಾವೂ ಅವರೊಂದಿಗೆ ಓಡಿ ಹೋದೆವು.

ಸದ್ದು ಸದ್ದೂ.... ಎನ್ನುತ್ತಲೆ ಮತ್ತೊಮ್ಮೆ ಮೌನ ಆವರಿಸಿತು, ಒಂದು ರೀತಿಯ ಆತಂಕ, ಕಳವಳ ಜನರ ಮೊಗದಲ್ಲಿ ಎದ್ದುಕಾಣುತಿತ್ತು. ಊರ ಹಿರಿಯರಾದ ನಾರಾಯಣಾಚಾರ್ಯರು, ಭದ್ರಚಾರ್ಯರು ಮತ್ತು ಊರ ಗೌಡರಾದ ರುದ್ರಮುನಿಯವರು ನ್ಯಾಯ ಕಟ್ಟೆಯ ಮೇಲೆ ಕುಳಿತಿದ್ದರು. ರುದ್ರಮುನಿಯವರು ಮೊದಲುಗೊಂಡು ಭಾರವಾದ ಮನಸ್ಸಿನಿಂದ "ನೊಡ್ರಪ್ಪಾ ಆಗಬಾರದ ಅಚಾತುರ್ಯ ಆಗಿಹೋಯಿತು, ನಾವೆಲ್ಲ ದೇವರಂತ ನಮ್ಮ ತಂದೆತಾಯಂತಿದ್ದ ರಾಜಪರಿವಾರವನ್ನು ಕಳೆದುಕೊಂಡುಬಿಟ್ಟೆವು. ಒಂದು ಲೆಕ್ಕದಲ್ಲಿ ನಾವೀಗ ನಿಜವಾಗಿ ಅನಾತರಾಗಿಬಿಟ್ಟೆವು. ಇದು ಇನ್ನೂ ನಮ್ಮೆನ್ನೆಲ್ಲ ಎಲ್ಲಿಗೆ ತಂದು ನಿಲ್ಲಿಸುತ್ತದೆಯೋ ಆ ದೇವರೆ ಬಲ್ಲ. ದೇವರಲ್ಲಿ ವಿಶ್ವಾಸವನ್ನಿಟ್ಟು ಮುಂದುವರೆಯೋಣ ಎಂದು ಕುಳಿತುಕೊಂಡರು. ಊರ ಹಿರಿಯರಾದ ನಾರಾಯಣಾಚಾರ್ಯರು ಮುಂದುವರೆದು ಮಾತಾನಾಡುತ್ತ, ಇದು ಇನ್ನಾವ ವಿಪತ್ತಿಗೆ ನಮ್ಮೆನ್ನೆಲ್ಲ ಎಡೆಮಾಡುತ್ತದಯೋ ನಾ ಕಾಣೆ..! ಆದರೆ ಶುಭಕಾಮನೆಯೊಂದಿಗೆ, ಮಹರಾಜರ ಅಮೃತ ಹಸ್ತದಿಂದ ಉದ್ಘಾಟನೆಗೊಂಡ ಈ ಮಂದಿರದ ಕಾರ್ಯ ನಿಲ್ಲಬಾರದೆಂಬುದು ನಮ್ಮೆಲ್ಲರ ತೀರ್ಮಾನ, ನಿಮ್ಮ ಅಭಿಪ್ರಾಯವೂ ಇದೇ ಅನ್ನುವುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ ಎನ್ನುತ್ತಿದ್ದಂತೆ. ಊರ ಜನರೆಲ್ಲರೂ ಹೌದು ಹೌದೂ... ಮಂದಿರ ಕಟ್ಟಲೆ ಬೇಕು, ಅದು ನಮ್ಮ ರಾಜರ ಕನಸು, ನಮ್ಮೆಲ್ಲರ ಕನಸು ನಮ್ಮೂರಿನ ಅಸ್ಮಿತೆ ಎಂದು ಒಕ್ಕೊರಿಲಿನಿಂದ ಕೂಗಿ ಹೇಳಿದರು. ಭದ್ರಚಾರ್ಯರು ಸದ್ದು ಸದ್ದೂ.. ಎನ್ನುತ್ತಾ ಈ ಮಹತ್ತರವಾದ ಕಾರ್ಯದಲ್ಲಿ ಎಲ್ಲರೂ ತಮ್ಮ ತಮ್ಮ ಶಕ್ತಾನುಸಾರ ತನು ಮನ ಧನ ಸೇವೆಗಳನ್ನು ಮಾಡಬೇಕಾಗುತ್ತದೆ, ಇದು ನಮ್ಮ ರಾಜರು ನಮಗೆಂದು ಕನಸು ಕಂಡ ಮಹೊನ್ನತ ಕಾರ್ಯ, ಹಾಗಾಗಿ ಊರ ಹಿರಿಯರು ಯೋಗ್ಯ ರೀತಿಯಲ್ಲಿ, ಯೋಜಿತ ರೀತಿಯಲ್ಲಿ ಎಲ್ಲರಿಗೂ ಒಪ್ಪುವಂತಹ ಮಂದಿರವನ್ನು ಇಲ್ಲೆ ಮಾಡಲು ಸರ್ವಾನುಮತದಿಂದ ನಿರ್ದರಿಸುತ್ತಾರೆ. ನಾಳೆಯಿಂದಲೆ ನಿಮ್ಮ ಸೇವೆಗಳನ್ನು ಯೋಜಿತವಾಗಿ ಸ್ವಿಕರಿಸಲಾಗುವುದು, ಮಂದಿರ ನಿರ್ಮಾಣ ನಮಗಾಗಿ ನಮ್ಮ ಊರಿಗಾಗಿ ನಮ್ಮೆಲ್ಲರ ಅಸ್ಮಿತೆಗಾಗಿ ನಮ್ಮ ರಾಜರ ಸವಿನೆನಪಿಗಾಗಿ ಮಾಡುತ್ತಿರುವುದರಿಂದ ಮಂದಿರ ನಿರ್ಮಾಣಕ್ಕೆ ಅಗತ್ಯವಾದ ಹಣಕಾಸು, ಅಗತ್ಯ ಸಂಪನ್ಮೂಲಗಳನ್ನೂ ನಾವೇ ಸಂಗ್ರಹಿಸೋಣ, ನಮ್ಮ ರಕ್ತವನ್ನು ನೀಡಿಯಾದರೂ ಸರಿಯೇ ನಮ್ಮ ಮಂದಿರವನ್ನು ಕಟ್ಟೋಣ ಎಂದು ಜಯಘೋಶಗಳನ್ನು ಮಾಡಿ ಸಬೆಯನ್ನು ಮುಗಿಸಿದರು.

ಅಂದಿನ ರಾತ್ರಿಯೇ ನಾರಾಯಣಾಚಾರ್ಯರ ಮನೆಯಲ್ಲಿ ಮಂದಿರ ನಿರ್ಮಾಣದ ಸಾದಕ-ಬಾದಕಗಳು, ಅಗತ್ಯ ಸಂಪನ್ಮೂಲಗಳ ಸಂಗ್ರಹದ ದಾರಿಗಳು, ನೀಲನಕಾಶೆ ಸಿದ್ದತೆ, ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳು, ಕಾಯ್ದುಕೊಳ್ಳಬೇಕಾದ ರಹಸ್ಯಗಳು, ಕಾಪಿಡಬೇಕಾದ ಗೌಪ್ಯತೆ ಹೀಗೆ ಹತ್ತು ಹಲವಾರು ವಿಚಾರಗಳನ್ನುನಿಷ್ಕರ್ಶಿಸಿನೀತಿನಿಯಮಗಳನ್ನುರೂಪರೇಷಗಳನ್ನು ಸಿದ್ದತೆ ಮಾಡುವ ಬಗ್ಗೆ ಚರ್ಚಿಸಲಾಯಿತು. ಅಗತ್ಯ ಬಾಹ್ಯ ಸಂಪನ್ಮೂಲಗಳನ್ನು, ಹಣಕಾಸು, ಕಲ್ಲು , ಮಣ್ಣು, ಕಟ್ಟಿಗೆ, ಜನಬಲ, ಪ್ರಾಣಿಗಳು, ಪರಿಕರಗಳು ಹೀಗೆ ಇವುಗಳನ್ನೆಲ್ಲ ಹೊಂದಿಸುವ ಜವಾಬ್ದಾರಿಯನ್ನು ಊರ ಗೌಡರಾದ ರುದ್ರಮುನಿಯವರಿಗೆ ನೀಡಲಾಯಿತು. ಮಂದಿರದ ನಕಾಶೆ, ಕಲ್ಲುಗಳ ಆಯ್ಕೆ, ಕೆತ್ತನೆ ಮತ್ತು ಜೋಡಣೆಯ ಜವಾಬ್ದಾರಿಯನ್ನು ನಿನ್ನ ಮುತ್ತಜ್ಜರಾದ ಭದ್ರಚಾರ್ಯರು ಒಪ್ಪಿಕೊಂಡರು, ಇವರೆಲ್ಲರಿಗೂ ಬೆಂಬಲವಾಗಿ ಅಗತ್ಯ ನೀತಿನಿಯಮಗಳು, ಪಡೆದುಕೊಳ್ಳಬೇಕಾದ ಪರವಾನಿಗೆಗಳು, ನೀಡಬೇಕಾದ ದೇಣಿಗೆಗಳು, ಯಜ್ಞಾಧಿ ಹವನ, ಪೂಜಾ ಪುನಸ್ಕಾರಗಳು, ಶಾಂತಿ ಪ್ರಕ್ರಿಯೆ, ಸೂಕ್ತ ಬಂದನಗಳು, ಜೊತೆಗೆ ವಾಸ್ತು ಸಂಬಂದಿತ ಮೇಲ್ವಿಚಾರಣೆಯನ್ನು ಊರಿನ ಹಿರಿಯರಾದ ನನ್ನಪ್ಪನಾದ ಆಚಾರ್ಯ ಶ್ರೀ ನಾರಾಯಣಾಚಾರ್ಯರಿಗೆ ಒಪ್ಪಿಸಲಾಯಿತು. ಇದೆಲ್ಲ ಅಂದು ತಡರಾತ್ರಿಯವರೆಗೆ ನಮ್ಮ ಮನೆಯ ಅಪ್ಪನ ಕೋಣೆಯಲ್ಲಿ ನೆಡೆದುದ್ದರಿಂದ ಅಪ್ಪನ ಜೊತೆಯಲ್ಲಿದ್ದ ನಾನು ಎಲ್ಲವನ್ನು ಕಣ್ಣಾರೆ ಕಂಡು, ಕೇಳಿಸಿಕೊಂಡಿದ್ದೆ ಮತ್ತು ತಡರಾತ್ರಿಯಾಗಿದ್ದರಿಂದ ನನಗೆ ಮಲಗಿಕೊಳ್ಳಲು ಹೇಳಿದರು ನಂತರ ನನಗೆ ಎಚ್ಚರವಾದಾಗ ಬೆಳಗಾಗಿತ್ತು.

ಅಂದು ಶ್ರಾವಣ ಶುದ್ಧ ಸೋಮವಾರ, ಕಳೆದ ಆರೇಳು ತಿಂಗಳಗಳಿಂದ ಭದ್ರಚಾರ್ಯರು ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು, ಆದರೆ ಅಂದೇಕೋ ಕೊಂಚ ಕಳವಳದಲ್ಲಿದ್ದಂತೆ ಕಾಣುತ್ತಿದ್ದರು. ನೇರವಾಗಿ ಅಪ್ಪನ ಕೋಣೆಗೆ ಸೇರಿಕೊಂಡವರೆ ಮೆಲು ಧ್ವನಿಯಲ್ಲಿ ಏನೇನೊ ಮಾತನಾಡುತ್ತಿದ್ದರು, ಅಗಲವಾದ ಬಿಳಿ ಹಾಳೆಯ ಮೇಲೆ ಹಲವಾರು ರೇಖಾ ಚಿತ್ರಗಳನ್ನು ಬರೆದು ಅಪ್ಪನಿಗೆ ಏನನ್ನೂ ವಿವರಿಸಿತಿದ್ದರು, ಕೊನೆಗೆ ತಾವು ತಂದಿದ್ದ ಹಾಳೆಯನ್ನು ಅಪ್ಪನಿಗೆ ಕೊಟ್ಟು ಹೊರಟು ಹೋದರು. ಒಂದೆರೆಡು ದಿನಗಳ ನಂತರ ಅಪ್ಪ ಕೂಡುತ್ತಿದ್ದ ಕುರ್ಚಿಯ ಎದುರುಗಡೆಯ ಗೋಡೆಯ ಮೇಲೆ ನಿಮ್ಮ ಮುತ್ತಜ್ಜ ಕೊಟ್ಟು ಹೋದ ಬಿಳಿ ಹಾಳೆಗೆ ಚಂದದ ಕಟ್ಟನ್ನು ಹಾಕಿ ನೇತುಹಾಕಿದ್ದರು..! ಹೀಗೆ ಅಪ್ಪನಿಲ್ಲದಾಗ ಅವರ ಕೋಣೆಯಲ್ಲಿದ್ದ ಆ ಚಂದದ ಚೌಕಟ್ಟಿನ ಚಿತ್ರವನ್ನು ನೋಡಿದೆ, ಏನು ತಿಳಿಯಲಿಲ್ಲ, ಯಾವುದೋ ಹಳೆಯ ಬಿದ್ದು ಹೋಗಿರುವ ಅರ್ದಮರ್ದ ಅರಮನೆಯಂತೆ ಕಾಣುತಿತ್ತು. ಅದೇನು ಎಂದು ಕೇಳಿದ್ದಕ್ಕೆ, ಆಯಿ ಹಾಗೆಲ್ಲ ಅದನ್ನು ಮುಟ್ಟುವ ಪ್ರಯತ್ನ ಮಾಡಬಾರದು ಎಂದು ನನ್ನನ್ನು ಗದರಿದ್ದರು.

ಸರಿ ಸುಮಾರು ಒಂದು ವರ್ಷಗಳ ಕಾಲ ಕಳೆದಿರಬೇಕು ನನಗಿನ್ನು ನೆನಪಿದೆ ಅಂದು ನಿಮ್ಮ ಮುತ್ತಜ್ಜ ಭದ್ರಚಾರ್ಯರು ಮತ್ತು ನಮ್ಮಪ್ಪ ಬೆಳ್ಳಂಬ ಬೆಳಗ್ಗೆ ನಮ್ಮೂರಿನ ಬೆಟ್ಟಕ್ಕೆ ಹಣ್ಣುಕಾಯಿ ಮತ್ತು ಮುಡಿಗಳನ್ನು ತೆಗೆದುಕೊಂಡು ಹೊರಟುನಿಂತರು. ನಾನು ಅಪ್ಪನ ಜೊತೆಯಲ್ಲಿ ಹೊರಡಲು ಎದ್ದು ನಿಂತೆ ಅಪ್ಪ ಏಕೋ... ಈ ದಿವಸ ಬೇಡ ಮಗು ಮತ್ತೊಮ್ಮೆ ಹೋಗಣವಂತೆ ಎನ್ನುತ್ತಿದ್ದಂತೆ ನಾನು ಹಟಮಾಡಿ ಅವರೊಂದಿಗೆ ಹೊರಡಲು ಅಣಿಯಾದೆ. ಮನೆಯ ಕೆಲದಾಳು ಕರಿಯ ಚಕ್ಕಡಿಯನ್ನು ಸಿದ್ದಗೊಳಿಸಿ ನಮ್ಮನ್ನೆಲ್ಲ ಕರೆದುಕೊಂಡು ಬೆಟ್ಟದ ಕಡೆಗೆ ಹೊರಟ.

ಊರುದಾಟಿದಂತೆ ದಾರಿ ಚಿಕ್ಕದಾಗುತ್ತ ನಮ್ಮೂರಿನ ಬೆಟ್ಟ ಬೃಹದಾಕಾರವಾಗಿ ಬೆಳೆಯುತ್ತಿರುವಂತೆ ಹತ್ತಿರ ಹತ್ತಿರ ಬರುತ್ತಿದ್ದಂತೆ ಕಾಣುತಿತ್ತು. ಬೆಟ್ಟದ ಮಲ್ಲೇಶ್ವರನ ಸನ್ನಿದಿಯ ಅತ್ಯಂತ ಮನಮೋಹಕ ಹಚ್ಚ ಹಸಿರಿನ ದಟ್ಟ ನೆಲ ಅಡವಿ ನಂತರ ಕೆಂಪು ಗೊರಸಿನ ಕಾಡು ಕಲ್ಲಿನ ಮೆಟ್ಟಿಲುಗಳು ಮುಂದುವರಿದಂತೆ ಎತ್ತರೆತ್ತರದ ಬೆಟ್ಟದ ಮಗ್ಗಲುಗಳು, ಒಂದಕ್ಕಿಂತ ಒಂದು ಎತ್ತರದ ಶಿಕರಗಳು ದೂರದಿಂದಲೆ ಹಚ್ಚ ಹಸಿರಿನ ಮದ್ಯ ಹುಣ್ಣಿಮೆಯ ಚಂದ್ರನಂತೆ ಕಂಗೊಳಿಸಿತ್ತಿದ್ದ ಬೆಟ್ಟದ ಮಲ್ಲೇಶ್ವರನ ಸನ್ನಿದಿ ನನ್ನಂತೂ ಮಂತ್ರ ಮುಗ್ದನ್ನನ್ನಾಗಿಸಿತ್ತು. ಆದರೆ ಅಪ್ಪ ಮತ್ತು ಭದ್ರಚಾರ್ಯರು ಮಾತ್ರ ಏನನ್ನೂ ಮೆಲು ದ್ವನಿಯಲ್ಲಿ ಮಾತನಾಡಿಕೊಳ್ಳುತ್ತಾ ಅಲ್ಲಲ್ಲೆ ನಮ್ಮ ಚಕ್ಕಡಿಯನ್ನು ನಿಲ್ಲಿಸುತ್ತ ಏನನ್ನೂ ಗುರುತಿಸಿಕೊಳ್ಳುತ್ತಿದ್ದರು, ನೆಲ ಅಡವಿಯ ಕೆಲ ಭಾಗಗಳಲ್ಲಿ ಬಹುದೂರ ಸಾಗಿ ಮತ್ತೆ ಬರುತ್ತಿದ್ದರು. ಆ ಸಮಯಕ್ಕೆ ನನಗೆ ಅಲ್ಲೆನಾಗುತ್ತದೆ ಎನ್ನುವುದು ಅಸ್ಪಷ್ಟವಾಗಿತ್ತು.

ಮಲ್ಲೇಶ್ವರನ ಸನ್ನಿದಿಯಲ್ಲಿ ಪೂಜೆ ಪ್ರಸಾದ ಮುಗಿದ ನಂತರ ನನ್ನನ್ನು ಕರಿಯನ ಜೊತೆ ಇರುವಂತೆ ಹೇಳಿ, ನಾವು ಬೇಗನೆ ಬರುತ್ತೇವೆ ಎಂದು ಅಪ್ಪ ಮತ್ತು ಆಚಾರ್ಯರು ಬೆಟ್ಟದ ತುದಿಯಭಾಗಕ್ಕೆ ಹೊರಟು ಹೋದರು. ಮನೆಗೆ ಹಿಂತಿರುಗಿದಾಗ ಸಮಯ ರಾತ್ರಿ ಯಾಗಿತ್ತು.

ಸುಮಾರು ಎರಡು ವರ್ಷಗಳೆ ಕಳೆದು ಹೋಗಿದ್ದವು, ಅಂದು ತರಾತುರಿಯಲ್ಲಿ ಬಂದ ನಿಮ್ಮ ಮುತ್ತಜ್ಜ ಜೊತೆಗೆ ನನ್ನ ಗೆಳೆಯ ನಿಮ್ಮಜ್ಜ ಮೌನಾಚಾರಿಯೂ ಇದ್ದ, ಕೈಯಲ್ಲಿದ್ದ ನಕಾಶೆಯಂತಹ ಹಾಳೆಯನ್ನು ಬಿಡಿಸಿ ನಿನ್ನಜ್ಜ ಮೌನಚಾರಿಯು ಮುಂದುವರಿದು ಏನೇನೊ ಹೇಳುತ್ತಿದ್ದರೆ ನಮ್ಮಪ್ಪನ ಕಣ್ಣಾಲೆಗಳು ಅರಳುತಿದ್ದವು, ಮೌನಿಯನ್ನು ಬೆನ್ನು ತಟ್ಟಿ ಅಪ್ಪ ಹುರಿದುಂಬಿಸುತ್ತಿದ್ದ ನನಗೂ ಆಶ್ಚರ್ಯ..! ಏನಿರಬಹುದೆಂದು ಮೌನಿಯನ್ನು ತದನಂತರ ಕೇಳಿದೆ ಅವನು ಹೇಳಿದ್ದು ಕೇಳಿ ನನಗೂ ದಿಗಿಲು ಬಡಿದಂತಾಯಿತು..! ಮತ್ತೊಂದು ಕಡೆಗೆ ನನ್ನ ಸ್ನೇಹಿತ ಮೌನಿಯ ಬುದ್ದಿವಂತಿಕೆಯನ್ನು ಕಂಡು ಹೆಮ್ಮೆಯಾಯಿತು.

ಅಷ್ಟು ಚಿಕ್ಕ ವಯಸ್ಸಿಗೆ ಅವನಲ್ಲಿನ ಶಿಲ್ಪ ಕೆತ್ತನೆಯ ಕೌಶಲ್ಯವನ್ನು ಕಲ್ಲಿನ ಗುಣ ಶ್ರೇಷ್ಟತೆಯನ್ನು ಅವನು ಅಂದಾಜಿಸುತ್ತಿದ್ದ ಪರಿಯೇ ಬೆರಗುಗೊಳಿಸುತ್ತಿತ್ತು, ಕಲ್ಲಿನ ಜೊತೆಗಿನ ಅವನ ತರ್ಕ ಹೇಗಿತ್ತೆಂದರೆ ಅವನ ಕೈಯಲ್ಲಿ ಕಲ್ಲರಳಿ ಹೂವಾಗುವುದರಲ್ಲಿ ಎರಡು ಮಾತಿರಲಿಲ್ಲ.

ಗೌಪ್ಯತೆಮತ್ತುಮಡಿಯನ್ನುಕಾಪಾಡಿಕೊಳ್ಳುವದೃಷ್ಟಿಕೋನದಿಂದ ಕಳೆದ ಐದು ವರುಷಗಳಿಂದ ದೇವಾಸ್ಥಾನ ಕಟ್ಟುವ ಆ ಜಾಗದ ಸುತ್ತಮುತ್ತಲೂ ಯಾರಿಗೂ ಪ್ರೇವೇಷವಿರಲಿಲ್ಲ. ಆದರೆ ಮೌನಿಯ ಕಾರಣದಿಂದಾಗಿ ಅಲ್ಪ ಸ್ವಲ್ಪ ವಿಷಯ ನನಗೂ ತಿಳಿಯುತ್ತಿತ್ತು. ಆದರೂ ಅವನು ಮೌನಿಯೇ ಸರಿ ಯಾರೊಂದಿಗೂ ಹೆಚ್ಚು ಮಾತನಾಡತಿರಲಿಲ್ಲ ಅದು ಅವನ ಹುಟ್ಟು ಗುಣವೇ ಆಗಿ ಹೋಗಿತ್ತು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ನಿನ್ನ ಮಡಿಲಲಿ ಮಗುವಾಗುವಾಸೆ



ಮತ್ತೆ ನಿನ್ನ ಗರ್ಭದಲಿ ಭ್ರೂಣವಾಗುವಾಸೆ
ಮೊಗ್ಗಾಗಿ ಹೊಟ್ಟೆಯಲಿ ನಯವಾಗಿ
ಅರಳುವಾಸೆ
ಹಿತವಾಗಿ ಭೂಮಿಗೆ ಬರುವಾಸೆ
ಮೊದಲ ಮುಖ ನಿನ್ನದೇ ನೋಡುವಾಸೆ

ಅಕ್ಕರೆಯ ಮಡಿಲಲಿ ಬೆಳೆಯುವಾಸೆ
ನಿನ್ನೆದೆಯ ಅಮೃತವ ಕುಡಿಯುವಾಸೆ
ನಿನ್ನ ಲಾಲಿ ಹಾಡ ಕೇಳುವಾಸೆ
ಮೃದುವಾದ ತೊಡೆಯ ಮೇಲೆ
ಮಲಗುವಾಸೆ
.
ನಿನ್ನ ಕೈಯ ಹಿಡಿದು ಅಂಬೆಗಾಲಿಡುವಾಸೆ
ತೊದಲ ತೊದಲ ನುಡಿಗಳಡುವಾಸೆ
ನಿನ್ನ ಸೆರೆಗಲಿ ಬಚ್ಚಿಟ್ಟುಕೊಳ್ಳುವಾಸೆ
ಚಂದ್ರನ ನೋಡುತ ನಿನ ಕೈ ತುತ್ತು
ತಿನ್ನುವಾಸೆ

ನಿನ್ನಯ ವಿದ್ಯೆಯ ಕಲಿಯುವಾಸೆ
ದೇಶಕೆ ನಾ ಮಹಾಜ್ಞಾನಿಯಾಗುವಾಸೆ
ಅಮ್ಮ ನಿನ್ನ ಕೀರ್ತಿ ಜಗಕೆ ಬೆಳಗುವಾಸೆ
ಎಷ್ಟೇ ಬೆಳೆದರೂ ನಾ ನಿನ್ನ ಮುದ್ದಿನ
ಕೂಸೆ

ಅಲ್ಪ ನಿನ್ನ ಋಣವ ತೀರಿಸುವಾಸೆ
ನಿನ್ನ ಉಸಿರಲಿ ಉಸಿರಾಗುವಾಸೆ
ನಿನ್ನ ಕಣ್ಣಿಗೆ ರೆಪ್ಪೆಯಾಗುವಾಸೆ
ಅಮ್ಮ ನಿನ್ನ ಮಡಿಲಲಿ ಮತ್ತೆ
ಮಗುವಾಗುವಾಸೆ

– ವಿ ಪರಶುರಾಮ
ಅಮರಾವತಿ ಹೊಸಪೇಟೆ

ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

08–12–2024 – ಭಾನುವಾರ

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶತಭಿಷ |
| ಯೋಗ | : ವಜ್ರ |
| ಕರಣ | : ವಾಣಿಜ |
| ಸೂರ್ಯೋದಯ | : 06:57:32 |
| ಸೂರ್ಯಾಸ್ತ | : 17:40:28 |
| ರಾಹು ಕಾಲ | : 16:20–17:40 |
| ಯಮಘಂಡ ಕಾಲ | : 12:19–13:39 |
| ಗುಳಿಕ ಕಾಲ | : 14:59–16:20 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 07–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.51 ಅಡಿ |
| ಒಳ ಹರಿವು | 4531 ಕ್ಯುಸೆಕ್ |
| ಹೊರ ಹರಿವು | 5164 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.239 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1592.04 ಅಡಿ |
| ಒಳ ಹರಿವು | 577 ಕ್ಯುಸೆಕ್ |
| ಹೊರ ಹರಿವು | 2347 ಕ್ಯುಸೆಕ್ |
| ಸಾಮರ್ಥ್ಯ | 12.817 ಟಿಎಂಸಿ |

**ಅಂಗಾಂಗ ದಾನ ಮಹಾದಾನ. ಆಕಸ್ಮಿಕ ಅಪಘಾತಗಳಲ್ಲಿ ಬ್ರೈನ್ ಡೆಡ್ ಎಂದು ಘೋಷಿಸಲ್ಪಟ್ಟ ವ್ಯಕ್ತಿಯ ಪಾಲಕರ ಒಪ್ಪಿಗೆಯ ಮೂಲಕ ಅವರ ಅಂಗಾಂಗಗಳನ್ನು ದಾನ ಪಡೆದು, ಅಂಗಾಂಗ ವೈಫಲ್ಯದ ತೊಂದರೆಗಳಿಂದ ನರಳುತ್ತಿರುವ ಹಲವಾರು ಜನರ ಬದುಕಿಗೆ ಬೆಳಕಾಗ ಬಹುದು...**

# ಆಧುನಿಕ ಸಾವಿತ್ರಿಯ ಸೂಕ್ತ ನಿರ್ಧಾರ

ಸಿಲಿಕಾನ್ ಸಿಟಿ ಬೆಂಗಳೂರಿನ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗವನ್ನು ಹೊಂದಿ, ಆರಂಕಿಯ ಸಂಬಳವನ್ನು ಎಣಿಸುವ ಸ್ವಂತ ಮನೆಯನ್ನು ಹೊಂದಿರುವ ಆತನಿಗೆ ಸುಂದರವಾದ ಪತ್ನಿ ಮತ್ತು ಇಬ್ಬರು ಮಕ್ಕಳು, ಪ್ರೀತಿಸುವ ತಂದೆ ತಾಯಿ ಊರಿನಲ್ಲಿ ಇದ್ದರೆ ಮತ್ತೊಬ್ಬ ಸೋದರ ಅದೇ ಊರಿನ ಮತ್ತೊಂದು ಬಡಾವಣೆಯಲ್ಲಿ ವಾಸವಾಗಿದ್ದ. ಬೆಚ್ಚನಾ ಮನೆ, ವೆಚ್ಚಕ್ಕೆ ಹೊನ್ನು ಇಚ್ಛೆಯನರಿತು ನಡೆವ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚಲು ಇನ್ನೇನು ಬೇಕು ಎಂಬಂತಹ ಜೀವನ ಶೈಲಿ. ಇಷ್ಟೇ ಆಗಿದ್ದರೆ ನನ್ನ ಅಂಕಣಕ್ಕೆ ಕಥೆಯಾಗುತ್ತಿರಲಿಲ್ಲ ಅವರ ಜೀವನ.

ಯಾವಾಗಲೂ ಚಟುವಟಿಕೆಯಿಂದಿರುತ್ತಿದ್ದ ಆಕೆಯ ಪತಿ ಕಳೆದ ಕೆಲ ತಿಂಗಳುಗಳಿಂದ ಸದಾ ಆರೋಗ್ಯದ ಸಮಸ್ಯೆಯನ್ನು ಎದುರಿಸುತ್ತಿದ್ದು ಆಕೆಯ ಚಿಂತೆಗೂ ಕಾರಣವಾಗಿತ್ತು. ಅದೆಷ್ಟೇ ಹೇಳಿದರೂ ವೈದ್ಯರಿಗೆ ತೋರಿಸಲು ಹಿಂಜರಿಯುತ್ತಿದ್ದ ಪತಿಯನ್ನು ಎಳೆದು ಕೊಂಡು ಹೋದ ಆಕೆಗೆ ಹಲವಾರು ಪರೀಕ್ಷೆಗಳ ನಂತರ ಅರಿವಾದದ್ದು ಆಕೆಯ ಪತಿಯ ಕಿಡ್ನಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು.

ರಿಪೋರ್ಟುಗಳನ್ನು ಹಿಡಿದು ಬೇರೆ ವೈದ್ಯರ ಸಲಹೆ ಪಡೆದರೂ ಕೂಡ ಎಲ್ಲರ ಅಭಿಪ್ರಾಯ ಮೂತ್ರಪಿಂಡಗಳನ್ನು ಬದಲಾಯಿಸಬೇಕು ಎಂದೇ ಆಗಿತ್ತು. ನಿರ್ದಿಷ್ಟ ಸಮಯವನ್ನು ಹೇಳದೆ ಹೋದರೂ ಸರಿಯಾದ ಪಥ್ಯ, ಚಿಕಿತ್ಸೆ ಮತ್ತು ಜೀವನಶೈಲಿಯನ್ನು ನಡೆಸುವ ಮೂಲಕ ಬದಲಿ ಮೂತ್ರಪಿಂಡ ಚಿಕಿತ್ಸೆಯನ್ನು ಮುಂದೂಡ ಬಹುದಿತ್ತೇ ಹೊರತು ಮೂತ್ರಪಿಂಡವನ್ನು ಬದಲಾಯಿಸದೆ ಇರಲು ಸಾಧ್ಯವಿರಲಿಲ್ಲ. ಒಂದೆರಡು ವರ್ಷ ಸಮಯಾವ ಕಾಶ ಅವರಿಗಿತ್ತು.

ಅದು ಕೊರೋನಾ ಸಮಯ. ತುಸು ದಪ್ಪನೆಯ ಕಾಯದವರಾಗಿದ್ದ ಆಕೆಯ ಪತಿ ತೂಕ ಇಳಿಸಿಕೊಳ್ಳಲು ತೆಗೆದುಕೊಂಡ ಪ್ರಚಲಿತವಾಗಿರುವ ಔಷಧೀಯ ಆಹಾರ ಉತ್ಪಾದನೆಗಳನ್ನು ಬಳಸಿದ್ದು ಅದು ಅವರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿರಬಹುದು ಎಂಬ ಅಭಿಪ್ರಾಯ ವೈದ್ಯರದಾಗಿತ್ತು. ಯಾವುದೇ ರೀತಿಯ ದುಶ್ಚಟಗಳಿಲ್ಲ ದಿದ್ದರೂ ಈ ರೀತಿ ಕಿಡ್ನಿ ವೈಫಲ್ಯವಾದದ್ದು ದಂಪತಿಗಳ ಮೇಲೆ ಹೆಚ್ಚಿನ ಮಾನಸಿಕ ಪರಿಣಾಮವನ್ನು ಬೀರಿತು. ಕೊರೊನಾದ ಸಂಕಷ್ಟ ಸಮಯದಲ್ಲಿ ಆತನ ಕಿಡ್ನಿಗಳು ಕೇವಲ 20% ನಷ್ಟು ಕ್ಷಮತೆಯನ್ನು ಮಾತ್ರ ಹೊಂದಿದ್ದು ಆತ ಖಿನ್ನತೆಗೆ ಒಳಗಾಗತೊಡಗಿದ್ದ.

ದಾನಿಗಳು ಮಾತ್ರ ಸಿಕ್ಕಿರಲಿಲ್ಲ... ಅದೊಂದು ದಿನ ಆಕೆಗೆ ನಾನೇಕೆ ನನ್ನ ಪತಿಗೆ ಮೂತ್ರಪಿಂಡವನ್ನು ನೀಡಬಾರದು ಎಂಬ ಯೋಚನೆ ತಲೆದೋರಿ ಈಗಾಗಲೇ ಪರಿಚಯವಾದ ಮೂತ್ರಪಿಂಡ ದಾನ ಮಾಡಿದ ಮತ್ತು ಕಸಿ ಮಾಡಿಸಿಕೊಂಡ ಸ್ನೇಹಿತರೊಂದಿಗೆ ಈ ಕುರಿತು ಚರ್ಚೆ ಮಾಡಿದ ಆಕೆ ಅಂತಿಮವಾಗಿ ವೈದ್ಯರ ಮುಂದೆ ಈ ಪ್ರಶ್ನೆಯನ್ನು ಇಟ್ಟಳು.

ಆಕೆಯದು ಓ ಪಾಸಿಟಿವ್ ರಕ್ತದ ಗುಂಪಾದ್ದರಿಂದ ಮೂತ್ರಪಿಂಡ ಕಸಿ ಮಾಡಲು ಯಾವುದೇ ತೊಂದರೆ ಇಲ್ಲ ಎಂದು ವೈದ್ಯರು ಹಸಿರು ನಿಶಾನೆ ತೋರಿಸಿದ ನಂತರ ಶುರುವಾಯಿತು ನೋಡಿ ವೈದ್ಯಕೀಯ ಮತ್ತು ಕಾನೂನು ಪ್ರಕ್ರಿಯೆಗಳು.

ಸ್ವತಹ ಆಕೆಯನ್ನು ಪರೀಕ್ಷಿಸಿ ಆಕೆಗೆ ಯಾವುದೇ ರೀತಿಯ ಮಾನಸಿಕ ಅಸ್ವಸ್ಥತೆ ಇಲ್ಲ, ಆಕೆ ಯಾರದೇ ಬಲವಂತವಿಲ್ಲದೆ ತನ್ನ ಸ್ವ ಇಚ್ಛೆಯಿಂದ ಮೂತ್ರಪಿಂಡ ದಾನವನ್ನು ಮಾಡುತ್ತಿದ್ದಾಳೆ ಎಂಬುದನ್ನು ಪರಿಶೀಲಿಸಿ ಎಲ್ಲಾ ಅವಶ್ಯಕ ಕಾಗದ ಪತ್ರಗಳಿಗೆ ಆಕೆಯ ರುಜು ಮಾಡಿಸಿಕೊಳ್ಳಲಾಯಿತು. ಆಕೆಯ ದೈಹಿಕ ಸಾಮರ್ಥ್ಯವನ್ನು ಪರೀಕ್ಷಿಸಲು ಕಣ್ಣು, ಕಿವಿ, ಮೂಗು ರಕ್ತದಲ್ಲಿ ಹಿಮೋ ಗ್ಲೋಬಿನ್ ಪ್ರಮಾಣ ಹೀಗೆ ದೈಹಿಕ ಸ್ವಾಸ್ಥ್ಯದ ಎಲ್ಲ ಬಗೆಯ ಪರೀಕ್ಷೆಗಳು ನಡೆದು ಆಕೆ ನೂರು ಪ್ರತಿಶತ ಮೂತ್ರಪಿಂಡ ದಾನ ಮಾಡಲು ಏನೂ ತೊಂದರೆ ಇಲ್ಲ ಎಂಬುದನ್ನು ವೈದ್ಯರು ದೃಢೀಕರಿಸಿದರು. ಈ ಎಲ್ಲಾ ಪ್ರಕ್ರಿಯೆಗಳಿಗೆ ತಗುಲಿದ ಸಮಯ ಆರು ತಿಂಗಳಾದರೆ, ನನ್ನ ಪತಿಗೆ ನಾನು ಕಿಡ್ನಿ ದಾನ ಮಾಡಲು ಇಷ್ಟೆಲ್ಲ ಪ್ರಕ್ರಿಯೆಗಳನ್ನು ಎದುರಿಸಬೇಕೇ ಎಂದು ಆಕೆ ಹೈರಾಣಾದದ್ದು ಸುಳ್ಳಲ್ಲ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper




ಕಿಡ್ನಿ ದಾನ ಮಾಡಬೇಕೆಂದು ಆಕೆ ಯೋಚಿಸಿದ ನಂತರ ಆ ಕುರಿತು ಮಾತನಾಡಿದ್ದು ತನ್ನ ವೈದ್ಯರು ಮತ್ತು ಈಗಾಗಲೇ ಕಿಡ್ನಿ ದಾನ ಮಾಡಿದ ಇನ್ನೋರ್ವ ಮಹಿಳೆ ಮತ್ತು ಕಿಡ್ನಿ ಪಡೆದು ಆರೋಗ್ಯವಾಗಿ ಇರುತ್ತಿದ್ದ ಮತ್ತೋರ್ವ ಹಿರಿಯ ಸ್ನೇಹಿತೆಯೊಂದಿಗೆ ಮಾತ್ರ.ಎಲ್ಲ ಪ್ರಕ್ರಿಯೆಗಳು ಮುಗಿದ ನಂತರ ಆಕೆ ತನ್ನ ಪಾಲಕರಿಗೆ ತನ್ನದೇ ಮೂತ್ರಪಿಂಡವನ್ನು ಪತಿಗೆ ನೀಡುವ ಕುರಿತು ಹೇಳಿದಳು.ಈ ಮೊದಲು ಅಳಿಯನ ಆರೋಗ್ಯದ ಕುರಿತು ಮಾತ್ರ ಚಿಂತಿಸುತ್ತಿದ್ದ ಆಕೆಯ ಪಾಲಕರು ಇದೀಗ ಆತನಿಗೆ ಕಿಡ್ನಿ ದಾನ ಮಾಡಿದ ಮೇಲೆ ತಮ್ಮ ಮಗಳ ಆರೋಗ್ಯಕ್ಕೆಲ್ಲಿ ಹಾನಿ ಯಾಗುತ್ತದೆ ಎಂಬ ಭಯ ಆತಂಕಗಳನ್ನು ಹೊಂದಿದ್ದರೂ ಕೂಡ ಅವರ ಭವಿಷ್ಯದ ಕುರಿತು ಯೋಚಿಸಿ ಅನುಮತಿ ಪತ್ರಕ್ಕೆ ಸಹಿ ಹಾಕಿದರು. ಜೊತೆಗೆ ಆಕೆಯ ಒಡಹುಟ್ಟಿದವರಿಂದಲೂ ಅನುಮತಿ ಪತ್ರಕ್ಕೆ ರುಜು ಮಾಡಿಸಿಕೊಳ್ಳಲಾಯಿತು.

ಮುಂದೆ ಅತ್ಯಂತ ಸರಳವಾಗಿ ಆಕೆಯ ಕಿಡ್ನಿಯನ್ನು ವೈದ್ಯಕೀಯ ಪ್ರಕ್ರಿಯೆಯ ಮೂಲಕ ಬೇರ್ಪಡಿಸಿ ಆಕೆಯ ಪತಿಗೆ ಕಸಿ ಮಾಡಲಾಯಿತು. ಅತ್ಯಂತ ಕಡಿಮೆ ಅವಧಿಯಲ್ಲಿ ವೈದ್ಯಕೀಯ ಚಿಕಿತ್ಸೆಯ ಮೂಲಕ ಚೇತರಿಸಿಕೊಂಡ ದಂಪತಿಗಳಿಬ್ಬರು ಇದೀಗ ನೆಮ್ಮದಿ ಮತ್ತು ಸಂತಸದ ಜೀವನವನ್ನು ನಡೆಸುತ್ತಿದ್ದಾರೆ.

ಆಗಾಗ ತಮಾಷೆಗಾಗಿ ಕಿತ್ತಾಡುವ ಅವರ ನಡುವೆ ನನ್ನ ಕಿಡ್ನಿ ನನಗೆ ಕೊಟ್ಟು ಬಿಡು ಎಂದು ಪತ್ನಿ ಹೇಳಿದಾಗ ಪೊಲೀಸರ ಮುಂದೆ ಸೈನ್ ಹಾಕಿದ್ದೀಯಾ ಈಗ ಅದು ನನ್ನ ಕಿಡ್ನಿ ಎಂದು ಆತನೂ ತಮಾಷೆಯಿಂದ ಉತ್ತರ ಹೇಳಿದರೂ ಕೂಡ ತನಗೆ ಕಿಡ್ನಿ ದಾನ ಮಾಡಿದ ಪತ್ನಿಯ ಕುರಿತು ಅಪಾರ ಗೌರವ, ಪ್ರೀತಿ ಆತನಿಗೆ.

ಇದೀಗ ಆರೋಗ್ಯಕರ ಜೀವನವನ್ನು ನಡೆಸುತ್ತಿರುವ ಆಕೆ ಹೇಳುವುದು ಇಷ್ಟೇ.... ಯಾವುದೇ ರೀತಿಯ ಆರೋಗ್ಯ ಸಮಸ್ಯೆಗಳನ್ನು ಎದುರಿಸಿದಾಗ ಸ್ವಯಂ ವೈದ್ಯಕೀಯ ಮಾಡಿಕೊಳ್ಳದೆ ನುರಿತ ತಜ್ಞ ವೈದ್ಯರನ್ನು ಭೇಟಿಯಾಗಿ ತಾನು ಕಿಡ್ನಿ ದಾನಿ ಎಂಬುದನ್ನು ಮೊದಲೇ ಹೇಳಿದರೆ ಆಕೆಗೆ ಕೊಡಬಹುದಾದ ಔಷಧಿ ಮಾತ್ರೆಗಳನ್ನು ಅವರು ನೀಡುತ್ತಾರೆ. ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ನಡಿಗೆಯಂತಹ ಶಿಸ್ತಿನ ದಿನಚರಿ ಮತ್ತು ಒಳ್ಳೆಯ ಆರೋಗ್ಯ ಸೇವನೆಯ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದರಿಂದ ವಯೋ ಸಹಜವಾಗಿ ಬರುವ ತೊಂದರೆಗಳನ್ನು ನಿಭಾಯಿಸಲು ಸಾಧ್ಯ ಎಂದು ಹೇಳಿದ ಆಕೆ ಇತ್ತೀಚಿಗೆ ತುಸು ಆರೋಗ್ಯ ಸಮಸ್ಯೆಗಳು ಕಾಡುತ್ತಿವೆ ಅಕ್ಕ, ಪ್ರೊಟೀನ್ಗ ಕೊರತೆ, ಕುಳಿತರೆ ಏಳಲು ಆಗುವುದಿಲ್ಲದಂತಹ ಸಣ್ಣಪುಟ್ಟ ದೈಹಿಕ ತೊಂದರೆಗಳು ಆಗುತ್ತಿವೆ ಎಂದು ಹೇಳಿದಳು.

ಸಹಜವಾಗಿ 40ರ ನಂತರ ಎಲ್ಲರಿಗೂ ಈ ಸಮಸ್ಯೆಗಳು ತಲೆದೋರುತ್ತವೆ ಅತ್ಯಂತ ಚಿಕ್ಕ ವಯಸ್ಸಿನಲ್ಲಿರುವ ಹೆಣ್ಣು ಮಕ್ಕಳು ಕೂಡ ಈ ಸಮಸ್ಯೆಗಳಿಂದ ಬಳಲುತ್ತಾರೆ. ಕಿಡ್ನಿ ನೀಡಿರುವುದರಿಂದ ಹೀಗಾಗುತ್ತದೆ ಎಂದು ಮನಸ್ಸಿನಲ್ಲಿ ಭಯ ಇಟ್ಟುಕೊಳ್ಳಬೇಡ. ಸೂಕ್ತ ಚಿಕಿತ್ಸೆ ಪಡೆದುಕೋ ಮತ್ತು ಒಳ್ಳೆಯ ಪೌಷ್ಟಿಕ ಆಹಾರವನ್ನು ಸೇವಿಸು ಎಂದಷ್ಟೇ ಹೇಳಿ ಮಾತು ಮುಗಿಸಿದೆ.

ಅಂಗಾಂಗ ದಾನ ಮಹಾದಾನ. ಆಕಸ್ಮಿಕ ಅಪಘಾತಗಳಲ್ಲಿ ಬ್ರೈನ್ ಡೆಡ್ ಎಂದು ಘೋಷಿಸಲ್ಪಟ್ಟ ವ್ಯಕ್ತಿಯ ಪಾಲಕರ ಒಪ್ಪಿಗೆಯ ಮೂಲಕ ಅವರ ಅಂಗಾಂಗಗಳನ್ನು ದಾನ ಪಡೆದು, ಅಂಗಾಂಗ ವೈಫಲ್ಯದ ತೊಂದರೆಗಳಿಂದ ನರಳುತ್ತಿರುವ ಹಲವಾರು ಜನರ ಬದುಕಿಗೆ ಬೆಳಕಾಗ ಬಹುದು, ಆದರೆ ಈ ಅಂಗಾಂಗಗಳ ದಾನದಲ್ಲಿ ಯಾವುದೇ ರೀತಿಯ ಅಕ್ರಮಗಳು, ದುರ್ಬಳಕೆಗಳು ನಡೆಯಬಾರದು ಎಂಬ ಕಾರಣಕ್ಕೆ ಹಲವಾರು ವೈದ್ಯಕೀಯ ಮತ್ತು ಕಾನೂನು ಪ್ರಕ್ರಿಯೆಗಳನ್ನು ಎದುರಿಸಲೇಬೇಕು.

ಅಂದು ಆ ಸಾವಿತ್ರಿ ತನ್ನ ಪತಿಯ ಪ್ರಾಣ ಭಿಕ್ಷೆಯನ್ನು ಪಡೆಯಲು ಯಮನನ್ನೇ ಮಣಿಸಿದರೆ ಇಂದು ಈ ಸಾವಿತ್ರಿ ತನ್ನ ಪತಿಯ ಪ್ರಾಣ ಉಳಿಸಲು ತನ್ನದೇ ದೇಹದ ಅಂಗವೊಂದನ್ನು ದಾನ ಮಾಡಿದಳು. ಆ ದಂಪತಿಗಳ ಜೀವನ ಆರೋಗ್ಯಕರವಾಗಿ ಸುಖಮಯವಾಗಿ ಸಾಗಲಿ ಎಂದು ಹಾರೈಸುವ.

**ಡಾ.ಎನ್.ಎಂ.ಗಿರಿಜಾಪತಿಯವರ ಕೃತಿ ಲೋಕಾರ್ಪಣೆ**

## ಯುವ ಸಂಶೋಧಕರಿಗೆ ದಾರಿದೀಪ

### ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ರವೀಂದ್ರನಾಥ ಹೇಳಿಕೆ




■ ಹಂಪಿ ಟೈಮ್ಸ್ ಕಂಪ್ಲಿ
ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪಟ್ಟಣದ ಗಂಗಾಸಂಕೀರ್ಣದಲ್ಲಿ ಹಮ್ಮಿಕೊಂಡಿದ್ದ ಲೇಖಕ ಡಾ.ಎನ್.ಎಂ.ಗಿರಿಜಾಪತಿಯವರ 'ಷಡಕ್ಷರಿದೇವನ ಶಬರಶಂಕರ ವಿಳಾಸಂ' ಕೃತಿ ಶುಕ್ರವಾರ ಲೋಕಾರ್ಪಣೆಗೊಂಡಿತು.

ಕನ್ನಡ ಹಿತರಕ್ಷಕ ಸಂಘದ ಗೌರವಾಧ್ಯಕ್ಷ ಕ.ಮ.ಹೇಮಯ್ಯಸ್ವಾಮಿ ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿ, ಲೇಖಕ ಗಿರಿಜಾಪತಿ ರಾಮಸಾಗರ ಪರಿಸರದವರಾಗಿದ್ದು, ಬಡತನದಲ್ಲಿ ಹುಟ್ಟಿ ಬೆಳೆದರೂ ವಿದ್ವಾಂಸರಾಗಿ ಹೊರಹೊಮ್ಮಿದ್ದು ಅವರ ಶೈಕ್ಷಣಿಕ ಸಾಧನೆಯ ಹಿರಿಮೆಯಾಗಿದೆ. ಮೊಬೈಲ್, ಸಾಮಾಜಿಕ ಮಾಧ್ಯಮಗಳ ಭರಾಟೆ ಯಲ್ಲಿ ಪುಸ್ತಕ ಓದುಗರ ಕಡಿಮೆಯಾಗು ತ್ತಿದ್ದಾರೆನ್ನುವ ಆಪಾದನೆ ನಡುವೆಯೂ ಉತ್ಕೃಷ್ಟ ಕೃತಿಗಳು ಹೊರಹೊಮ್ಮುತ್ತಿರುವುದು ಸಂತಸದ ವಿಷಯ. ಉತ್ತಮ ಲೇಖಕರ ಕೃತಿಗಳಿಗೆ ಓದುಗರ ಬರವಿಲ್ಲ. ಸರ್ಕಾರ ಲೇಖಕರ ಕೃತಿಗಳನ್ನು ಆಯ ಸಾಲಿನಲ್ಲಿಯೇ ಕೊಂಡು ಪ್ರೋತ್ಸಾಹಿಸುವಲ್ಲಿ ಚುರುಕಾಗಿ ಕೆಲಸ ಮಾಡಬೇಕಿದೆ ಎಂದರು.

ಹಂಪಿ ಕನ್ನಡ ವಿವಿಯ ಹಿರಿಯ ಸಂಶೋಧಕ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ರವೀಂದ್ರನಾಥ ಕೃತಿ ಪರಿಚಯಿಸಿ ಮಾತನಾಡಿ, ಹಳಗನ್ನಡ ಓದನ್ನು ವಿದ್ಯಾರ್ಥಿ ರೂಢಿಸಿಕೊಳ್ಳಬೇಕಿದೆ. ಹಳೆಗನ್ನಡ ಸಾಹಿತ್ಯ ಲೋಕಾನುಭವವನ್ನು, ಸಾಂಸ್ಕೃತಿಕ ಆಸ್ಮಿತೆ ಯನ್ನು, ಭಾಷಾಶುದ್ಧಿ ಹಾಗೂ ಪ್ರೌಢಿಮೆಯನ್ನು ತಂದುಕೊಡುತ್ತದೆ. ಕಸಾಪ ನಿಘಂಟುಗಳಿಗೆ ಹಳೆಗನ್ನಡ ಸಾಹಿತ್ಯ ಮೂಲ ಆಕರವಾಗಿದೆ. ಹಳೆಗನ್ನಡ ಕಾವ್ಯಗಳಿಗೆ, ಬೆಡಗಿನ ವಚನಗಳಿಗೆ ಬರೆದ ಟೀಕು ವ್ಯಾಖ್ಯಾನಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ಉಪಪತ್ಯಗಳಾಗಿದ್ದು, ಶಬರಶಂಕರ ವಿಳಾಸಂ ಕೂಡಾ ಉಪಪತ್ಯ ಉತ್ಪಾದಿಸುತ್ತದೆ. ವಿದ್ಯಾರ್ಥಿಗಳು ಹಳೆಗನ್ನಡ ಕಾವ್ಯಗಳನ್ನು ಶೈಕ್ಷಣಿಕ ಪಠ್ಯಗಳಿಂದ ಉಪೇಕ್ಷಿಸುವುದು ಸರಿಯಲ್ಲ. ಲೇಖಕ ಡಾ.ಎನ್.ಎಂ.ಗಿರಿಜಾಪತಿ ಯವರ ಷಡಕ್ಷರಿದೇವನ ಶಬರಶಂಕರ ವಿಳಾಸಂ ಕೃತಿ ಮುಂದಿನ ಸಂಶೋಧಕರಿಗೆ ದಾರಿದೀಪವಾಗಿದೆ ಎಂದರು. ಕಸಾಪ ತಾಲೂಕು ಅಧ್ಯಕ್ಷ ಷಣ್ಮುಖಪ್ಪ ಚಿತ್ರಗಾರ್ ಅಧ್ಯಕ್ಷತೆವಹಿಸಿದ್ದರು. ಕನ್ನಡ ಹಿತರಕ್ಷಕ ಸಂಘದ ಅಧ್ಯಕ್ಷ ಬಿ.ಅಂಬಣ್ಣ, ಪದಾಧಿಕಾರಿಗಳಾದ ಅಂಬಿಗರ ಮಂಜುನಾಥ, ಬಂಗಿ ದೊಡ್ಡ ಮಂಜು ನಾಥ, ಎಸ್.ಡಿ.ಬಸವರಾಜ, ವೀರಮ್ಮ ನಾಗರಾಜ, ಎಸ್.ವಿಜಯಲಕ್ಷ್ಮಿ, ಅಶೋಕ ಕುಕನೂರು, ಎಲಿಗಾರ ವೆಂಕಟರೆಡ್ಡಿ, ಯು.ಎಂ.ವಿದ್ಯಾಶಂಕರ, ಬಡಿಗೇರ ಜಿಲಾನ್‌ಸಾಬ್ ಸೇರಿ ಇತರರಿದ್ದರು.






ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

Greetings
You can also say in Hampi Times
Ads Starts from Rs.1000/-
94486 33038

## ಪೂರ್ವಭಾವಿ ಸಭೆಯಲ್ಲಿ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಅಧಿಕಾರಿಗಳಿಗೆ ಸೂಚನೆ

# ಹನುಮಮಾಲಾ ವಿಸರ್ಜನೆ ಸುಸೂತ್ರವಾಗಿ ನಡೆಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ಕಳೆದ ವರ್ಷ ಚೆನ್ನಾಗಿ ನಡೆಯಿತು ಎಂದು ಸಾರ್ವಜನಿಕರು ತಿಳಿಸಿದರು. ಅದರಂತೆ ಈ ವರ್ಷವು ಯಾವುದೇ ಸಮಸ್ಯೆಗಳಾಗದಂತೆ ಸುಸೂತ್ರವಾಗಿ ನಡೆಸಿ ಎಂದು ಹಿಂದುಳಿದ ವರ್ಗಗಳ ಕಲ್ಯಾಣ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಹೇಳಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಡಿಸೆಂಬರ್ 12 ಮತ್ತು 13 ರಂದು ನಡೆಯಲಿರುವ ಹನುಮಮಾಲ ವಿಸರ್ಜನೆ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಹನುಮಮಾಲ ಕಾರ್ಯಕ್ರಮದಲ್ಲಿ ಯಾವುದೇ ಸಮಸ್ಯೆಗಳಾಗದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು. ಈ ಸಮಿತಿಯ ನೋಡಲ್ ಅಧಿಕಾರಿಗಳು ಖುದ್ದಾಗಿ ಹಾಜರಿದ್ದು ತಮಗೆ ವಹಿಸಿದ ಜವಾಬ್ದಾರಿಯನ್ನು ಚೆನ್ನಾಗಿ ನಿರ್ವಹಿಸಬೇಕು. ಪೊಲೀಸರು 4 ರಿಂದ 5 ಕಡೆ ಚೆಕಪೋಸ್ಟಗಳನ್ನು ತೆರೆಯಬೇಕು. ಜನರು ಬರುವುದಕ್ಕೆ ಒಂದು ಕಡೆ ಮತ್ತು ಹೋಗುವುದಕ್ಕೆ ಇನ್ನೊಂದು ಕಡೆ ಮಾರ್ಗಗಳನ್ನು



ಮಾಡಿ ಟ್ರಾಫಿಕ್ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದರು.

ಕಳೆದ ಸಲಕ್ಕಿಂತ ಈ ಸಲ ಹೆಚ್ಚು ಜನರು ಬರುತ್ತಾರೆ ಹಾಗಾಗಿ ಬರುವ ಜನರಿಗೆ ಊಟದ ಸಮಸ್ಯೆಯಾಗಬಾರದು ಮತ್ತು ಒಳ್ಳೆಯ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿ. ನದಿಯಲ್ಲಿ ಸ್ನಾನಮಾಡಿ ಜನ ಬಟ್ಟೆಗಳನ್ನು ಅಲ್ಲಿ ಬಿಟ್ಟು ಹೋಗುತ್ತಾರೆ. ಅವುಗಳನ್ನು ಒಂದು ಕಡೆ ತೆಗೆದು ಹಾಕುವ ವ್ಯವಸ್ಥೆಯಾಗಬೇಕು. ಎಲ್ಲರಿಗೂ ಸ್ನಾನಕ್ಕೆ ಅನುಕೂಲವಾಗುವ ರೀತಿಯಲ್ಲಿ ಹೆಚ್ಚಿನ ನೀರಿನ ಟ್ಯಾಪಗಳನ್ನು ಅಳವಡಿಸಿ ಎಂದು ಹೇಳಿದರು.

ಆರೋಗ್ಯ ಸಮಿತಿ, ಸ್ವಚ್ಛತೆ, ಬ್ಯಾರಿಕೇಡ್, ಸಾರಿಗೆ, ರಸ್ತೆ ನಿರ್ವಹಣಾ, ಆಹಾರ, ಅರಣ್ಯ ಸಮಿತಿ ಸೇರಿದಂತೆ ಇತರೆ ಸಮಿತಿಯವರು ತಮ್ಮ ಕೆಲಸಗಳನ್ನು ಜವಾಬ್ದಾರಿಯಿಂದ ಮಾಡಿ. ಅಂಜನಾದ್ರಿ ಪಕ್ಕದಲ್ಲಿಯ ಅರಣ್ಯದಲ್ಲಿ ಚಿರತೆ ಮತ್ತು ಕರಡಿ ಹಾವಳಿ ಜಾಸ್ತಿ ಇದೆ. ಹಾಗಾಗಿ ಯಾವುದೇ ಅನಾಹುತಗಳಾಗದಂತೆ ಅರಣ್ಯ ಇಲಾಖೆಯ ಸಿಬ್ಬಂದಿಗಳು ರಾತ್ರಿಗಸ್ತು ತಿರುಗಬೇಕೆಂದರು.

ಶಿಷ್ಟಾಚಾರ ಪಾಲನೆ ಸಮಿತಿಯರು ಯಾರೇ ಶಾಸಕರು ಹಾಗೂ ಸಚಿವರು ಬಂದಾಗ ಶಿಷ್ಟಾಚಾರ ನಿಯಮ ಪಾಲನೆ ಮಾಡಬೇಕು. ಹಲವಾರು ಜನರು ಬರುವದರಿಂದ ಸ್ವಚ್ಛತೆ ನಿರ್ವಹಣೆ ಕಾಪಾಡಿಕೊಳ್ಳಬೇಕು. ಅಂಜನಾದ್ರಿ ಸುತ್ತಲಿನ ಪ್ರದೇಶದಲ್ಲಿ ಮದ್ಯಪಾನ ನಿಷೇಧ ಮಾಡಬೇಕು. ಇತರೆ ವಿವಿಧ ಇಲಾಖೆಗಳಿಗಿಂತ ಪೊಲೀಸ್ ಹಾಗೂ ರೆವಿನ್ಯೂ ಇಲಾಖೆಯ ಜವಾಬ್ದಾರಿ ಬಹಳ ಇದೆ ಎಂದು ಹೇಳಿದರು.

ಸಭೆಯಲ್ಲಿ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಕೊಪ್ಪಳ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೇದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ ಕುಮಾರ್, ಜಿ.ಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಕಂಪ್ಲಿಯಲ್ಲಿ ಚಂಪಾ ಷಷ್ಠಿಗೆ ನಾಗಸುಬ್ರಹ್ಮಣ್ಯಾರಾಧನೆ

■ **ಹಂಪಿ ಟೈಮ್ಸ್ ಕಂಪ್ಲಿ**

ನಾಗಸುಬ್ರಹ್ಮಣ್ಯ ಆರಾಧನೆಯಿಂದ ವಿವಾಹ ಪ್ರತಿಬಂಧಕ ಸೇರಿ ನಾನಾ ಸಂಕಷ್ಟಗಳಿಂದ ಪಾರಾಗಬಹುದು ಎಂದು ಇಲ್ಲಿನ ಶ್ರೀಮನ್ನಾರಾಯಣಾಶ್ರಮದ ಪರಮಹಂಸ ನಾರಾಯಣ ವಿದ್ಯಾಭಾರತಿ ಶ್ರೀಗಳು ಹೇಳಿದರು.

ಇಲ್ಲಿನ ಸತ್ಯನಾರಾಯಣಪೇಟೆಯ ವೆಂಕಟರಮಣ ದೇವಸ್ಥಾನದಲ್ಲಿ ಶನಿವಾರ ಜರುಗಿದ, ನಾಗಸುಬ್ರಹ್ಮಣ್ಯ (ಸ್ಕಂದ) ಚಂಪಾ ಷಷ್ಠಿ ಆರಾಧನೆಯ ನಿಮಿತ್ತ ಧರ್ಮ ಜಾಗೃತಿ ಸಭೆ ಸಾನ್ನಿಧ್ಯವಹಿಸಿ ಮಾತನಾಡಿ, ಅನನ್ಯ ಭಕ್ತಿಯಿಂದ ಚಂಪಾಷಷ್ಠಿಯನ್ನು ಆಚರಿಸಿದಲ್ಲಿ ಬೇಡಿದ ಇಷ್ಟಾರ್ಥ ಸಿದ್ದಿಸಲು ಸಾಧ್ಯ ಎಂದು ಆಶೀರ್ವಚನ ನೀಡಿದರು. ಚಂಪಾ ಷಷ್ಠಿ ನಿಮಿತ್ತ ಏಳುಹೆಡೆ ನಾಗಪ್ಪನಿಗೆ ರುದ್ರಾಭಿಷೇಕ, ಪಂಚಾಮೃತದೊಂದಿಗೆ ಅಷ್ಟೋತ್ತರ



ಮಹಾಪೂಜೆ, ಅನ್ನಸಂತರ್ಪಣೆ ಜರುಗಿತು. ಚರ್ಮ, ಮನೋರೋಗ ನಿವಾರಣೆಗೆ ಸಂಕಲ್ಪಿಸಿ ಸರ್ವ ಸಮುದಾಯವರು ಬ್ರಹ್ಮಚಾರಿ (ವಟು) ವಿಗೆ ವಸ್ತ್ರದಾನ, ಹಾಲು, ನಾಗ ಬಿಂಬವನ್ನು ದಾನ ಮಾಡಿದರು. ಸೇವಾ ಧರ್ಮದರ್ಶಿಗಳಾದ ವೈಷ್ಣವಿ ಕೃಷ್ಣಮೂರ್ತಿ, ಲಲಿತಾರಾಣಿ ಗಿರೀಶ್, ರೂಪಾ ಗುರುಪ್ರಸಾದ್, ಸವಿತಾಶಶಿಧರ್, ಭಗವತಿ, ಆಶ್ವತ್ಥನಾರಾಯಣ, ಸದ್ಭಕ್ತರು ಪಾಲ್ಗೊಂಡಿದ್ದರು.

## ಅಲ್ಪಸಂಖ್ಯಾತರ ಬಿ.ಇಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕೆ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25 ನೇ ಸಾಲಿಗೆ ಬಿ.ಇಡಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ನೀಡಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಗುಂಡಪ್ಪ ತಿಳಿಸಿದ್ದಾರೆ.

ಪ್ರಸ್ತುತ ಸಾಲಿನ ಎನ್ಸಿಟಿಇನಿಂದ ಮಾನ್ಯತೆ ಹೊಂದಿದ ಸರ್ಕಾರಿ/ಅರೆ ಸರ್ಕಾರಿ/ ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ದಾಖಲಾತಿ ಹೊಂದಿ ಬಿ.ಇಡಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ) ವಿದ್ಯಾರ್ಥಿಗಳಿಗೆ ರೂ. 25000 ರೂಗಳ ವಿಶೇಷ ಪ್ರೋತ್ಸಾಹಧನವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮಾ ಮಾಡಲಾಗುವುದು. ಈ ಸೌಲಭ್ಯವನ್ನು ಪಡೆದುಕೊಳ್ಳಲು ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ಆಸಕ್ತ ಅಲ್ಪಸಂಖ್ಯಾತರ ಸಮುದಾಯದ ಬಿ.ಇಡಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಲ್ಲಾ ಇಲಾಖೆ ದಾಖಲೆಗಳ ಸಹಿತ ಸೇವಾಸಿಂಧು ಪೋರ್ಟಲ್ ɿttp:// sevasindhu.karanataka.gov.in ಮುಖಾಂತರ ಆನ್ಲೈನ್ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಸೀಡಿಂಗ್ ಹಾಗೂ NCPI Mapping ಆಗಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ http://dom.karanat aka.gov.in ಅನ್ನು ವೀಕ್ಷಿಸಿ ಹಾಗೂ ಜಿಲ್ಲಾ ಹಾಗೂ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಬಹುದಾಗಿದೆ. ಹೊಸಪೇಟೆ – 8050435366, ಕೂಡ್ಲಿಗಿ ಮತ್ತು ಕೊಟ್ಟೂರು – 9060330060, ಹರಪನಹಳ್ಳಿ –8494927891, ಹೂವಿನ ಹಡಗಲಿ– 7353696984, ಹಗರಿ ಬೊಮ್ಮನಹಳ್ಳಿ – 9980237242 ಸಂಪರ್ಕಿಸಿ

## ಬಳ್ಳಾರಿಯಲ್ಲಿ 05 ಮಂದಿ ಬಾಣಂತಿಯರ ಸಾವು ಪ್ರಕರಣ

# ಉನ್ನತ ತಜ್ಞರ ಸಮಿತಿಗೆ ಶಿಫಾರಸ್ಸು

### ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ । ಬಿಮ್ಸ್‌ಗೆ ಭೇಟಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿಯ ಜಿಲ್ಲಾಸ್ಪತ್ರೆಯಲ್ಲಿ ಸಂಭವಿಸಿದ ಬಾಣಂತಿಯರ ಸಾವು ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದ್ದು, ಇದರ ಕುರಿತಾಗಿ ಉನ್ನತ ತಜ್ಞರ ಸಮಿತಿ ರಚಿಸಿ ತನಿಖೆ ನಡೆಸಿ, ಅವರು ನೀಡುವ ವರದಿಯನ್ನಾಧರಿಸಿ ಸೂಕ್ತ ಕ್ರಮ ಕೈಗೊಳ್ಳಲಾ ಗುವುದು ಎಂದು ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಅವರು ಹೇಳಿದರು.

ಅವರು, ಶನಿವಾರದಂದು ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಬಳಿಕ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಐವಿ ರಿಂಗರ್ ಲ್ಯಾಕ್ಟೇಟ್ ದ್ರಾವಣ ಬಳಕೆಗೆ ಯೋಗ್ಯವಲ್ಲ ಎಂದು ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ವರದಿ ನೀಡಿದ್ದರೆ, ಸೆಂಟ್ರಲ್ ಡ್ರಗ್ಸ್ ಲ್ಯಾಬ್ (ಅಆಐ) ಪಾಸಿಟಿವ್ ವರದಿ ನೀಡಿದೆ. ಇದನ್ನು ಉಲ್ಲೇಖಿಸಿ ಡ್ರಗ್ಸ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ)ಗೆ ಪತ್ರ ಬರೆದು ಪ್ರಶ್ನೆ ಮಾಡಿದ್ದೇವೆ. ಪಶ್ಚಿಮ್ ಬಂಗಾ ಫಾರ್ಮಾಸ್ಯುಟಿಕಲ್ಸ್ ವಿರುದ್ಧ ಪ್ರಾಸಿಕ್ಯೂಷನ್‌ಗೆ ಆದೇಶಿಸಲಾಗುವುದು ಎಂದರು.

ಬಾಣಂತಿಯರ ಸಾವಿಗೆ ಸಂಬಂಧಿಸಿದಂತೆ



ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರಕ್ಕಾಗಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಗುವುದು. ತಜ್ಞರ ಸಮಿತಿ ತಂಡ ಕಳುಹಿಸುತ್ತೇವೆ. ಎಲ್ಲಿ ತಪ್ಪಾಗಿದೆ ಅದನ್ನು ಕಂಡು ಹಿಡಿಯಬೇಕಿದೆ ಎಂದರು.

ಜಿಲ್ಲೆಯ ಬಾಣಂತಿಯರ ಅಸಹಜ ಸಾವಿನ ಬಗ್ಗೆ ಮಾಹಿತಿ ಬರುತ್ತಿದ್ದಂತೆ ತನಿಖೆ ನಡೆಸಲು ರಾಜೀವ್ ಗಾಂಧಿ ವಿವಿ ಉಪಕುಲಪತಿ ನೇತೃತ್ವದಲ್ಲಿ ತಂಡ ರಚಿಸಿ ವರದಿ ಪಡೆಯಲಾಗಿದೆ. ಆರಂಭದಲ್ಲಿಯೇ ಈ ಐವಿ ಫ್ಲೂಯಿಡ್ ಬಗ್ಗೆ ಅನುಮಾನ ವ್ಯಕ್ತಪಡಿಸಲಾಗಿತ್ತು. ಸದ್ಯ ಈ ಕಂಪನಿಯ ಐವಿ ಫ್ಲೂಯಿಡ್ ಸಂಪೂರ್ಣವಾಗಿ ಸರಬರಾಜು ಸ್ಥಗಿತ ಮಾಡಲಾಗಿದೆ. ರಾಜ್ಯದಲ್ಲಿ ಇಂತಹ ಸಾವು ಮರುಕಳಿಸಬಾರದು ಎಂದು ಅವರು ತಿಳಿಸಿದರು.

ಬಳಿಕ ಹೆರಿಗೆ ಕೋಣೆಗಳ ಸಮುಚ್ಚಯಕ್ಕೆ ಭೇಟಿ ನೀಡಿ, ಅಲ್ಲಿನ ಬಾಣಂತಿಯರ ಆರೋಗ್ಯ ಕ್ಷೇಮ ವಿಚಾರಿಸಿದರು. ಜಿಲ್ಲಾ ಆಸ್ಪತ್ರೆಯಿಂದ ಕೈಗೊಳ್ಳುವ ಆರೈಕೆ ಕ್ರಮಗಳ ಕುರಿತು ಮಾಹಿತಿ ಪಡೆದುಕೊಂಡರು.



ಈ ವೇಳೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಕಂಪ್ಲಿ ಶಾಸಕ ಜೆ.ಎನ್.ಗಣೇಶ್, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಮುಲ್ಲಂಗಿ ನಂದೀಶ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎನ್.ಬಸರೆಡ್ಡಿ ಸೇರಿದಂತೆ ವೈದ್ಯಾಧಿಕಾರಿಗಳು ಹಾಗೂ ಇತರರು ಇದ್ದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ — ನಿನ್ನ ಏಳಿಗೆಗೆ ನೀನೇ ಶಿಲ್ಪಿ

### ವ್ಯವಹಾರ ಅಧ್ಯಯನ: ಅಧ್ಯಾಯ–33 : ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**1) ಪ್ರತಿ ವರ್ಷ ವಿಶ್ವ ಗ್ರಾಹಕರ ದಿನಾಚರಣೆಯನ್ನು ಯಾವಾಗ ಆಚರಿಸಲಾಗುತ್ತದೆ.?** : **ಉತ್ತರ:** ಮಾರ್ಚ 15

**2) ಗ್ರಾಹಕ ಸಂರಕ್ಷಣಾ ಅಂದೋಲನ ಮೊದಲಿಗೆ ಪ್ರಾರಂಭವಾದ ದೇಶ ಯಾವುದು?** : **ಉತ್ತರ:** ಅಮೇರಿಕಾ

**3) ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಯಾವಾಗ ಜಾರಿಗೆ ಬಂತು? (ಸೆಪ್ಟೆಂಬರ್ 2022)**

**ಉತ್ತರ:** 1986ರಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದಿತು.

**4) ಗ್ರಾಹಕ ರಕ್ಷಣೆ ಎಂದರೇನು?**

**ಉತ್ತರ:** ಗ್ರಾಹಕರನ್ನು ಉತ್ಪಾದಕರ ಮತ್ತು ವ್ಯಾಪಾರಿಗಳ ಶೋಷಣೆಯಿಂದ ರಕ್ಷಿಸಲು ಕೈಗೊಂಡಿರುವ ಕಾರ್ಯಗಳನ್ನು ಗ್ರಾಹಕ ರಕ್ಷಣೆ ಎನ್ನುತ್ತಾರೆ.

**5) 'ಮಾರುಕಟ್ಟೆಯ ರಾಜ' ಎಂದು ಯಾರನ್ನು ಕರೆಯಲಾಗಿದೆ ?**

**ಉತ್ತರ:** ಗ್ರಾಹಕ.

**6) 'ಟೆಲಿಷಾಪಿಂಗ್' ಎಂದರೇನು? ಅಥವಾ ಇತ್ತೀಚಿನ ದಿನಗಳಲ್ಲಿ 'ಟೆಲಿಷಾಪಿಂಗ್ ಹೆಚ್ಚು ಜನಪ್ರಿಯವಾಗಿದೆ. ಏಕೆ? (ಏಪ್ರಿಲ್ 2024)**

**ಉತ್ತರ:** ಮನೆಯಲ್ಲೇ ಕುಳಿತು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ವಸ್ತುಗಳನ್ನು ಕೊಳ್ಳಬಹುದಾಗಿದೆ. ಇದನ್ನು'ಟೆಲಿಷಾಪಿಂಗ್' ಎನ್ನುತ್ತಾರೆ

**7) ವಿಶ್ವಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವದ ದಿನವಾಗಿದೆ. ಏಕೆ? (ಜೂ, ಸೆಪ್ಟೆಂಬರ್ 2020,2022, ಏ.2024,)**

**ಉತ್ತರ:** ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ಅವರು ಅಲ್ಲಿನ ನಾಗರಿಕರಿಗೆ 1 ಸಂರಕ್ಷತೆ, 2 ಮಾಹಿತಿ, 3 ನಿವೇದನೆ ಮತ್ತು 4 ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡಿದರು.ಈ ಕಾರಣದಿಂದ ಪ್ರತಿ ವರ್ಷವು ಮಾರ್ಚ್ 15ನೇ ತಾರೀಖಿನಂದು "ವಿಶ್ವ ಗ್ರಾಹಕರ ಹಕ್ಕುಗಳ ದಿನ" ಆಚರಿಸಲಾಗುತ್ತದೆ.

**8) ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು? ಅಥವಾ ಬಳಕೆದಾರರ ಶೋಷಣೆಗೆ ಕಾರಣಗಳಾವುವು?**

**ಉತ್ತರ:** 1. ಗ್ರಾಹಕ ಮತ್ತು ಪೂರೈಕೆದಾರರ ನಡುವೆ ನೇರ ವ್ಯವಹಾರ ಇಲ್ಲ., 2. ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸುತ್ತಾರೆ.
3. ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು.
4. ಮಾರಾಟಗಾರರು ಗ್ರಾಹಕರನ್ನು ನಿರ್ಲಕ್ಷ್ಯ ಮಾಡುತ್ತಾರೆ.
5. ಗ್ರಾಹಕರನ್ನು ಶೋಷಿಸುತ್ತಾರೆ ಹಾಗೂ ಮೋಸಗೊಳಿಸುತ್ತಾರೆ..

**9) ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯಉದ್ದೇಶಗಳನ್ನು ತಿಳಿಸಿರಿ. (ಜೂನ್ 2022, ಜೂನ್ 2023)**

**ಉತ್ತರ:** 1. ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಆದ್ಯತೆ ನೀಡುವುದು.2. ಅಪಾಯಕಾರಿ ವಸ್ತುಗಳ ಮಾರಾಟವನ್ನು ತಪ್ಪಿಸುವುದು. 3. ಅವ್ಯವಹಾರಗಳನ್ನು ತಡೆಗಟ್ಟುವುದು. 4.ಗುಣಮಟ್ಟ, ಅಳತೆ, ತೂಕ, ಬೆಲೆಗಳ ಮೇಲೆ ನಿಗಾವಹಿಸುವುದು.5. ತೊಂದರೆಗೆ ಒಳಗಾದಲ್ಲಿ ಸೂಕ್ತ ಪರಿಹಾರ ಕೊಡಿಸುವುದು. 6. ಗ್ರಾಹಕ ಶಿಕ್ಷಣದ ಜಾಗೃತಿ ಮೂಡಿಸುವುದು.

**10) ಗ್ರಾಹಕರ ಹಕ್ಕುಗಳಾವುವು?**

**ಉತ್ತರ:** 1 ಮಾಹಿತಿ ಪಡೆಯುವ ಹಕ್ಕು
2.. ಅಪಾಯಕಾರಿ ವಸ್ತುಗಳ ವಿರುದ್ಧ ರಕ್ಷಣೆಯ ಹಕ್ಕು.
3. ವಸ್ತುಗಳ ಆಯ್ಕೆಯ ಹಕ್ಕು 4. ವಸ್ತುಗಳ ಬಗ್ಗೆ ಆಲಿಸುವ ಹಕ್ಕು
5. ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು
6. ಗ್ರಾಹಕ ಶಿಕ್ಷಣದ ಹಕ್ಕು., 7. ಮೋಸದ ವಿರುದ್ಧದ ಹಕ್ಕು.

**11) ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?**

**ಉತ್ತರ:** 1. ದೂರುಗಳು ಕೈಬರಹದ ಅಥವಾ ಬೆರಳಚ್ಚಿನಲ್ಲಿರಬೇಕು.
2. ದೂರುದಾರನ ಪೂರ್ಣ ವಿಳಾಸ ನಮೂದಿಸಿರಬೇಕು.
3. ವ್ಯಾಪಾರಿಯ ಪೂರ್ಣ ವಿಳಾಸ ನಮೂದಿಸಿರಬೇಕು.
4. ಯಾವ ವಸ್ತುವಿನಿಂದ ನಷ್ಟವಾಗಿದೆ ಎಂಬುದು ಮತ್ತು ನಷ್ಟದ ಮೊತ್ತವನ್ನು ನಮೂದಿಸಿರಬೇಕು.
5. ಸಂಬಂಧಪಟ್ಟ ರಸೀದಿ/ಬಿಲ್ಲನ್ನು ಲಗತ್ತಿಸಬೇಕು.
6. ದೂರಿಗೆ ಯಾವುದೇ ಶುಲ್ಕ ಇರುವುದಿಲ್ಲ.

| | |
|---|---|
| 1 ಕೋಟಿ ರೂ.ಗಳಿಗಿಂತ. ಕಡಿಮೆ ಮೌಲ್ಯದ ಗ್ರಾಹಕ ದೂರುಗಳನ್ನು ಸಲ್ಲಿಸಬೇಕಾಗಿರುವ ವೇದಿಕೆ | ಜಿಲ್ಲಾ ವೇದಿಕೆ |
| 1 ಕೋಟಿ ಯಿಂದ 10 ಕೋಟಿ ವರೆಗಿನ ಗ್ರಾಹಕ ದೂರಗಳನ್ನು ಸಲ್ಲಿಸಬೇಕಾದ ವೇದಿಕೆ | ರಾಜ್ಯ ಆಯೋಗ |
| 10ಕೋಟಿ ರೂಪಾಯಿ ಗಳಿಗಿಂತ ಹೆಚ್ಚು ಮೌಲ್ಯದ ದೂರನ್ನು ಸಲ್ಲಿಸಬೇಕಾದ ವೇದಿಕೆ | ರಾಷ್ಟ್ರೀಯ ಆಯೋಗ ವೇದಿಕೆ |

www.hampitimes.com - Hampi Times Margadarshi

### ವ್ಯವಹಾರ ಅಧ್ಯಯನ: ಅಧ್ಯಾಯ–32. ಉದ್ಯಮಶೀಲತೆ

**1. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ? (ಜೂನ್ 2024)**

**ಉತ್ತರ:** ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು 1978 ರಲ್ಲಿ ಸ್ಥಾಪಿಸಲಾಗಿದೆ.

**2.ಉದ್ಯಮಿಯ ಕಾರ್ಯಗಳಾವುವು?/ ಗುಣಲಕ್ಷಣಗಳಾವುವು? (ಜೂನ್2020,2024)**

1.ಉದ್ಯಮದಲ್ಲಿ ಹೊಸ ಪದ್ಧತಿಯನ್ನು ರೂಢಿಗೆ ತರುವುದು 2.ಸೃಜನಾತ್ಮಕತೆ ಯಿಂದ ಕೂಡಿರುವುದು 3.ಕ್ರಿಯಾತ್ಮಕತೆ ಯಿಂದ ಕೂಡಿರುವುದು 4.ನಾಯಕತ್ವ ವಹಿಸುವುದು 5.ಗುಂಪು ಕಟ್ಟುವುದು 6.ನಿರ್ಧಾರ ಕೈಗೊಳ್ಳುವುದು 7. ಆಯ-ವ್ಯಯವನ್ನು ನಿಭಾಯಿಸುವುದು 8.ಕಷ್ಟ-ನಷ್ಟಗಳನ್ನು ಎದುರಿಸವುದು. 9. ಮಾರ್ಗದರ್ಶನ ನೀಡುವುದು. 10.ಉತ್ಪಾದನಾಂಗಗಳನ್ನು ಸಂಯೋಜಿಸುವುದು 11.ನಾಯಕತ್ವ ವಹಿಸುವುದು 12.ಸಮಸ್ಯೆಯ ಪರಿಹಾರ ಕಂಡುಕೊಳ್ಳುವುದು.

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ, ಸಮಾಜ ವಿಜ್ಞಾನ ಶಿಕ್ಷಕರು,** ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ